
ಅಪರಂಜಿ



ತಿಳಿನಗೆಯ ಕಾರಂಜಿ

- ಆನಂದ್
- ಲೀಲಾನಾಥ್ ಕೊಂಬ್ರಬೈಲ್
- ಜಿ. ಎನ್. ಜಿ
- ಅಪ್ರಸುತ
- ಸೋಮಿ
- ಶಿವು
- ಮೈ. ನಾ .ಜಯಕೇಸರಿ
- ಜಿ. ಎನ್. ಜಿ.
- ಡಾ॥ ಪರಡ್ಡಿ ಮಲ್ಲಿಕಾರ್ಜುನ
- ಸುನೀತಿ ಕೃಷ್ಣಸ್ವಾ
- ಬಿ. ಎ. ಸನದಿ
- ಎಸ್. ವಿಶ್ವನಾಥ್

ಸಂಪುಟ–

ಬಿಡಿಪ್ರತಿ :

ಕೇವಲ ಒಂದು ರೂಪಾಯಿ

ಸಂಚಿಕೆ–

ಜೂನ್–8


ಮಾಸ್‌ಕಾಟ್ ಆಗ್ರೋ ಕೆಮಿಕಲ್ಸ್
ಪ್ರೈವೇಟ್ ಲಿಮಿಟೆಡ್

93, 3ನೇ ಘಟ್ಟ,
ಪೀಣ್ಯ ಇಂಡಸ್ಟ್ರಿಯಲ್ ಏರಿಯ,
ಬೆಂಗಳೂರು–560 058

ದೂರವಾಣಿ : 38902 ತಂತಿ 'ಮಾಸ್‌ಕಾಟ್' ಟೆಲೆಕ್ಸ್ 845–580

ಭತ್ತ, ಕಬ್ಬು ಮತ್ತು ಗೋದಿಯ ಬೆಳೆಗಳಲ್ಲಿ ಕಳೆ ನಿಯಂತ್ರಣ ಮಾಡುವುದಕ್ಕೆ "ನಾಕ್ವೀಡ್" ಕಳೆ ನಾಶಕವನ್ನು ಉಪಯೋಗಿಸಿರಿ.

ಶುಭಾಶಯಗಳೊಂದಿಗೆ :—



ಎಸ್. ಎಸ್. ಗಿರಿಮಾಜಿ ಅಂಡ್ ಸನ್ಸ್
[ಬೆಂಗಳೂರು]

ನಂ. 46, ಇಂಡಸ್ಟ್ರಿಯಲ್ ಸಬರ್ಬ್,
ಯಶವಂತಪುರ, ಬೆಂಗಳೂರು- 560 022

ಅಪರಂಜಿ ವಾರ್ಷಿಕ ಚಂದಾ : ರೂ. 15-00

ಗೌರವ ಸಲಹೆಗಾರರು :

ಶ್ರೀ ಅ.ರಾ.ಸೇ.

ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :

ಶ್ರೀ ಶಿವಕುಮಾರ್

ಅ.ರಾ.ಸೇ. ಅವರ ಹೊಸ ಪುಸ್ತಕ

ಚಿರತೆ ವೀರನ ಕೋಟೆ

ಹನ್ನೆರಡು ಹಾಸ್ಯ ಲೇಖನಗಳ ಸಂಗ್ರಹ

ಸಂಶೋಧನೆ :

* ೫೦೮೦ ವರ್ಷಗಳ ಹಿಂದಿನ ಕನ್ನಡ ಶಾಸನ !
* ವಿದುರನ ಪ್ರೇಮ ಪ್ರಸಂಗ !
* ವೈಶಂಪಾಯನರು ಜೈಮಿನಿ ಭಾರತದ ಲವ್ಸೀನುಗಳ ಬಗ್ಗೆ ಏಕೆ ಕನ್ಫ್ಯೂಸ್ ಆದರು ?

ತನಿಖಾ ವರದಿ :

ಮುಗಿಲು ಹಳ್ಳಿಯಲ್ಲಿ ಚುನಾವಣೆ

ಶೀನಣ್ಣನ ಕತೆಗಳು :

(೧) ಶೀನಣ್ಣ ವಿಧಿಯ ಮೇಲೆ ಮೀಸೆ ತಿರುವಿದ್ದು.

(೨) ನಾಯಿಕುನ್ನಿ ಶೀನಣ್ಣನನ್ನು ನಿರಾಕರಿಸಿದ್ದು.

☆

ಪುಟಗಳು : 106 ಬೆಲೆ : ರೂ. 10-00

ಪ್ರತಿಗಳಿಗೆ : ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ, ಬೆಂಗಳೂರು-560 003 ಇಲ್ಲಿಗೆ ಬರೆಯಿರಿ.

ಈ ಸಂಚಿಕೆಯಲ್ಲಿ ....

ಮುದ್ರಣ ; ಇಂಪ್ರೆಷನ್ಸ್. ಮಲ್ಲೇಶ್ವರಂ,
ದೂರವಾಣಿ : 36 29 89
36 34 44



ಸಂಪುಟ—೨ ಜೂನ್ ೧೯೮೫ ಸಂಚಿಕೆ—೯

ಬ್ರಹ್ಮದಿಂದ ಕರ್ಮ, ಕರ್ಮದಿಂದ ಯಜ್ಞ, ಯಜ್ಞದಿಂದ ಪರ್ಜನ್ಯ.
ಪರ್ಜನ್ಯದಿಂದ ಅನ್ನ. ಅನ್ನದಿಂದ ಪ್ರಾಣಿಗಳು ಹುಟ್ಟುತ್ತವೆ

—ಗೀತಾ

ಮಂತ್ರಿಗಳೊಬ್ಬರು, ಒಬ್ಬ ಯೋಗಿಗಳನ್ನು . ಮಳೆಗಾಗಿ ಪರ್ಜನ್ಯ ಜಪ ಮಾಡಿರಿ ಎಂದು ಕೇಳಿದರಂತೆ, ವಾದ ವಿವಾದಗಳು ಹುಟ್ಟಿಕೊಂಡವು.

ಸೂರ್ಯಗ್ರಹಣ ಚಂದ್ರಗ್ರಹಣಗಳಾದಾಗ ಸ್ನಾನಮಾಡಿ ತರ್ಪಣ ಕೊಟ್ಟರೇ ವಾದ ವಿವಾದಗಳು ಹುಟ್ಟುತ್ತವೆ. ಇದಕ್ಕೆ ಬಿಟ್ಟಾವೇ ?

(ಹಲವಾರು ಶತಮಾನಗಳಿಂದ) ಶಾಸ್ತ್ರೋಕ್ತವಾಗಿ ಜಪ ಹೋಮಾದಿಗಳನ್ನು ಮಾಡಿದಾಗ ಇಚ್ಛಿತ ಫಲ ದೊರೆತಿದೆ ಎಂದು ಅನುಭವಿಸಿದವರು ಹೇಳುತ್ತಿದ್ದಾರೆ. ಅದು ವೈಜ್ಞಾನಿಕವಲ್ಲ ಎಂಬ ಪ್ರತಿಭಟನೆಯೂ ಈಚೆಗೆ ಹುಟ್ಟಿದೆ. ಅಸಹನೆ ವೈಜ್ಞಾನಿಕವೇ ಎಂಬ ಉಪಪ್ರಶ್ನೆ ಹುಟ್ಟಿಕೊಳ್ಳುತ್ತದೆ.

ವಿಜ್ಞಾನದ ಅನ್ವಯ ತುಟ್ಟ ತುದಿಯಲ್ಲಿರುವಲ್ಲೂ ಪ್ರಕೃತಿಯ ವಿಕೋಪ ತಪ್ಪಿಲ್ಲ. ವಿಜ್ಞಾನದ ಅನ್ವೇಷಣೆಗಳಿಂದ ಮಾನವಕುಲ ನಾಶದ ಹೊಸತಿಲಿಗೆ ತಲುಪಿದೆ. ಹಾಗಾದರೆ ವಿಜ್ಞಾನವೂ ಅವೈಜ್ಞಾನಿಕವೇ ? ಬರ್ನಾರ್ಡ್ ಷಾ ಬ್ಯಾಕ್‌ಟು ಮೆಥೂಸೆಲದಲ್ಲಿ ಹೇಳಿರುವುದನ್ನು ಅವಲೋಕಿಸುವುದು ಲಾಭದಾಯಕ.

ಯಾವ ದೇವರ ಚಾವಡಿಯಾದರೇನು ನಿದ್ದೆ ಬಂದದ್ದೇ ಸಾಕು. ಪರ್ಜನ್ಯ ಹೋಮದಿಂದ ಸುವೃಷ್ಟಿಯಾದರೆ ಅದೇ ಲಾಭ. ಪ್ರಗತಿ ಮೌಢ್ಯಗಳ ಚರ್ಚೆ ಮಳೆ ತರಿಸುತ್ತದೆಯೇ ?

ಕಾಲ ಕಾಲಕ್ಕೆ ಸುವೃಷ್ಟಿಯಾಗಲಿ ಎಂದು ಅಪರಂಜಿ ಹಾರೈಸುತ್ತಾಳೆ.

ಅಪರಂಜಿ ಕಿಡಿ

—ಆನಂದ್

ಶ್ರೀ ಪ್ರಸನ್ನ ಅವರ ಸಹಾಯರ್ಥ ಕ್ರಿಕೆಟ್ಸ್ ಪಂದ್ಯ ಸಫಲವಾಗಿ ನಡೆಯಿತಂತೆ

—ಸುದ್ದಿ

ಅವರು ಪ್ರಸನ್ನರಾಗಿರಬೇಕು !

* * * *

ಭಾರತದ ಪ್ರಥಮ ಸಮರ ಟ್ಯಾಂಕ್‌ಗೆ ಅರ್ಜುನ ಎಂಬ ಹೆಸರು

—ಪತ್ರಿಕೆ

ಸಮರದ ಆರಂಭದಲ್ಲಿ ಅದು ಅರ್ಜುನಂತಾಗದಿರಲಿ !

* * * *

'ಜಪದಿಂದ ಮಳೆ' ಅವೈಜ್ಞಾನಿಕ

—ವಾಚಕರ ವಾಣಿ

ಮಾತುಗಳ ಮಳೆಯಂತೂ ಸುರಿಯಿತಲ್ಲ !

* * * *

ತಿರುವನಂತಪುರದಲ್ಲಿ ಪೋಲಿಸ್ ಅಧಿಕಾರಿಯ ಮನೆಯಲ್ಲೇ ಕಳವು

—ಸುದ್ದಿ

ಟೀಕೆ ಅನಗತ್ಯ !

* * * *

ಮಾಜೀ ಕಾಂಗ್ರೇಸಿಗರು ಅವರದೇ ಜಗತ್ತಿನಲ್ಲಿದ್ದಾರೆ

—ಶ್ರೀ ರಾಜೀವ್ ಗಾಂಧಿ

ಸದ್ಯ, ನಾವು ಅಲ್ಲಿಲ್ಲವಲ್ಲ ಅಂತ ಈಗಿನ ಕಾಂಗ್ರೆಸಿಗರು ಖುಷಿ ಪಟ್ಟರೇನೋ!

* * * *

ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ; ಅಲ್ಪ ಆದಾಯದವರಿಗೆ ಗುರುತಿನ ಚೀಟಿ

—ಪತ್ರಿಕೆ

ಗುರುತಿನ ಚೀಟಿಗಳಿಂದಲೇ ಆದಾಯ ಬರುತ್ತೇನೋ ?

* * * *

ಶ್ರೀ ಭುಜಬಲ್ ಬೊಂಬಾಯಿಯ ಮೇಯರ್ ಆಗಿ ಚುನಾಯಿತರಾದರು

—ಸುದ್ದಿ

ದೇಶದಲ್ಲಿ ಅವರಂಥವರ ಅಗತ್ಯ ಬಹಳ ಇದೆ !

* * * *

ಮ ದು ವೆ

ಮದುವೆ ಅನ್ನೋದು
ಚಾಕಲೇಟ್‌ಗಳ
ಪ್ಯಾಕೆಟ್ ಇದ್ದ ಹಾಗೆ
ನಿಮಗೆ ಒಂದು ಪೀಸ್ ಬೇಕಾದ್ರೂ ಇಡೀ ಪ್ಯಾಕಟನ್ನೇ
ಕೊಂಡುಕೋ ಬೇಕಾಗುತ್ತೆ.

ಅ ನು ಭ ವ : ನೀವು ಕೂದಲನ್ನ
ಕಳಕೊಂಡ ಮೇಲೆ ಜೀವನ.
ಕೊಡುವ ಬಾಚಣಿಗೆ

ಕನ್ನಡದ ಕಸ್ತೂರಿ

—ಲೀಲಾನಾಥ್ ಕೊಂಬ್ರ ಬೈಲ್

"ತ್ರಿಚಕ್ರವಾಹನ ಚಾಲಕನಿಗೂ ನನಗೂ ನಡೆದ ಸಂಭಾಷಣೆ"

ನಾನು :—ಎಯ್‌ಟೀನ್ತ್ ಕ್ರಾಸ್‌ಗೆ ಹೋಗಪ್ಪ.

ಚಾಲಕ :—ನಿಮ್‌ದೂಕೆ ಕನ್ನಡ ಬರಾಕಿಲ್ಲಾ ? ಕನ್ನಡದಾಗೆ ಮಾತ್ನಾಡು.

ನಾನು :—ಚೆನ್ನಾಗಿ ಬರುತ್ತೆ. ೧೮ನೇ ಅಡ್ಡರಸ್ತೆ, ೧೨ನೇ ಮುಖ್ಯ ರಸ್ತೆ ಸೇರುವ ಜಂಟಿ ಮೂಲೆಗೆ ವಾಹನವನ್ನು ಚಲಿಸು.

(ಸ್ವಲ್ಪ ದೂರ ಹೋಗುವುದರೊಳಗೆ ವಾಹನ ನಿಂತಿತು).

ಚಾಲಕ :—ಪೆಟ್ರೋಲ್ ಆಗ್ಹೋಗ್ ಬಿಟ್ಟಿದ್ದಾರೆ ಸಾರ್.

ನಾನು :—ನಿನಗೆ ಕನ್ನಡ ಬರೋದಿಲ್ವೆ ? ಇಂಧನ ಆಗ್ಹೋಗಿದೆ ಸ್ವಾಮಿ ಎಂದು ಹೇಳು.

ಚಾಲಕ :—ಟೆನ್ ರುಪೀಸ್ ಕೊಡಿ ಸಾರ್, ಪೆಟ್ರೋಲ್ ಹಾಕಿಸ್ಕೊಂಡು ಆಮೇಲೆ ಎಡ್ಜೆಸ್ಟ್ ಮಾಡೋಣ.

ನಾನು :—(ಕೋಪದಿಂದ) ಗೂಬೆ, ಹತ್ತು ರೂಪಾಯಿ ಕೊಡಿ ಸ್ವಾಮಿ, ಇಂಧನ ಶೇಖರಣೆ ಭಂಡಾರಕ್ಕೆ ಹೋಗಿ ಇಂಧನ ತುಂಬಿಕೊಂಡು ಮುಂದಿನ ಪ್ರಯಾಣ ಮಾಡೋಣ ಹತ್ತು ರೂಪಾಯನ್ನು ನಂತರ ಸಮಾಕರಿಸೋಣ ಎಂದು ಬೊಗಳು.

ಚಾಲಕ :—ಸರಿ ಸಾರ್.

ನಾನು :—ಮಗನೆ ಮತ್ತೆ ಆಂಗ್ಲ ಭಾಷೆ ಉಪಯೋಗಿಸಬೇಡ, ಸ್ವಾಮಿ ಎಂದು ಹೇಳು.

ಚಾಲಕ :—ಅರೆ ಸಾಮಿ ನಮ್‌ದೂಕೆ ತಕ್‌ಲೀಫ್ ಮಾಡ್ಬೇಡ.

ನಾನು :—ಇಂಧನ ತುಂಬಿದ ನಂತರ ನನ್ನನ್ನು ಶೇಷಾದ್ರಿ ಮಾರ್ಗವಾಗಿ, ವಿಧಾನ ಸೌಧದ ಪಕ್ಕದಲ್ಲಿ ಹಾದು, ಕಬ್ಬನ್ ಉದ್ಯಾನವನದ ಮೂಲಕ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಕರೆದುಕೊಂಡು ಹೋಗು.

ಚಾಲಕ :—ಸಾಮಿ ನಮ್‌ದೂಕೆ ಬುದ್ಧಿ ಇದಾದೆ, ಮೆಹರ್‌ಬಾನಿ ಮಾಡಿ ಮಾಫ್ ಕರೊ. ಗಾಡಿಯಿಂದ ಇಳಿದು ಬಿಡು.

ನಾನು :—ಇಳಿಯಲಿಕ್ಕೆ ಹತ್ತಿದ್ದಲ್ಲ ಜಾಸ್ತಿ ಮಾತನಾಡ ಬೇಡ ನಾನು ಹೇಳಿದ ಜಾಗಕ್ಕೆ ಕರೆದುಕೊಂಡು ಹೋಗು.

ಚಾಲಕ :—(ಇಂಧನ ಶೇಖರಣೆ ಭಂಡಾರದಲ್ಲಿ) ಮತ್ತೊಬ್ಬ ಚಾಲಕನ ಹತ್ತಿರ : ಏ ಬೊಮ್ಮನ್ ಹೈನಾ ಬಹೋತ್ ತಕ್‌ಲೀಫ್ ದೇರಹಾಹೈ,

ನಾನು :—ನಿನ್ನ ಜಾತಿ ನಂಗೊತ್ತಿದೆ. ಬೊಮ್ಮನ್ ಗಿಮ್ಮನ್ ಅಂದ್ರೆ ಆರಕ್ಷಕ ದಳದವರಿಗೆ ದೂರವಾಣಿಯಿಂದ ನಿನ್ನ ವಾಹನದ ಸಂಖ್ಯೆ ತಿಳಿಸುತ್ತೇನೆ. ಏನ್ ಹೇಳ್ತಿಯಾ ?

ಚಾಲಕ :—ಮಾಫ್‌ಕರೊ ಸಾಮಿ, ನಿಮ್‌ದೂಕೆ ನೀನ್ ಹೇಳೊತಾವ ಬಿಡ್ತೀನಿ, ಕಾಸ್ ಕೊಡ್ಬೇಡ ಪೋಲೀಸ್‌ಗೆ ಮಾತ್ರ ಹೇಳ್ಬೇಡ.

ನಾನು :—ಮತ್ತೆ ಆಂಗ್ಲ ಭಾಷೆ ಉಪಯೋಗಿಸಬೇಡ, ಆರಕ್ಷಕ ದಳದವರಿಗೆ ಎಂದು ಹೇಳು.


ಚಾಲಕ :—ಅರೆ ಸಾಮಿ, ಸಾಮಿ ನಿಮ್‌ದೂಕೆ ದೋಸ್ತಿ ಸಾಕು, ಆಜ್ ಸಬೇರೆ ಏಕ್ ಬಿಲ್ಲೀದ ಮುಖ ನೋಡ್ಬಿಟ್ಟಿ ಇಸ್ಲಿಯೇ ಏ ಸಬ್ ತಕ್‌ಲೀಫ್. (ಸಾರ್ವಜನಿಕ ಪುಸ್ತಕ ಭಂಡಾರದ ಹತ್ತಿರ ಇಳಿದು ತ್ರಿಚಕ್ರ ವಾಹನದ ಯಂತ್ರದ ಪ್ರಕಾರ ೪ ರೂಪಾಯಿ ೩೦ ಪೈಸೆಯನ್ನು ೧೦ ರೂಪಾಯಿನಲ್ಲಿ ಕಳೆದು ಉಳಿದ ಬಾಕಿಯನ್ನು ಚಾಲಕನಿಂದ ಪಡೆದೆ).

ಚಾಲಕನು ನನ್ನನ್ನೇ ದುರುಗುಟ್ಟಿಕೊಂಡು ನೋಡುತ್ತಾ, ಸಬೇರೆ ಬದ್ಮಾಶಿ ಕನ್ನಡ ಪಂಡಿತ್‌ಜೀದು ದೋಸ್ತಿ ಆಯ್ತು ಎಂದು ಕೊಂಡ.

ವಾಪಸ್ ಬರುವಾಗ ಸರ್ಕಾರಿ ಸಾರ್ವಜನಿಕ ಆರು ಚಕ್ರದ ವಾಹನದಲ್ಲಿ' ಹಣದ ಚೀಲವನ್ನು ಯಾರೂ ಅಪಹರಿಸದಂತೆ ಕಾಪಾಡಿಕೊಂಡು ಸುರಕ್ಷಿತವಾಗಿ ಮನೆ ಸೇರಿದೆ, ಇದು ನನ್ನ ಸ್ವಂತ ಅನುಭವ, ಪ್ರಯತ್ನ ಪಟ್ಟರೆ ಕಾಲ ಕ್ರಮದಲ್ಲಿ ಆಂಗ್ಲ ಶಬ್ದಗಳನ್ನು ಉಪಯೋಗಿಸದೆ 'ಕನ್ನಡದಲ್ಲಿ ಮಾತನಾಡುವುದು ಲೇಖನಗಳನ್ನು ಬರೆಯುವುದು ಸಾಧ್ಯವೆಂದು ನನ್ನ ಅಭಿಪ್ರಾಯ.

(ಕನ್ನಡದ ಅರ್ಥವನ್ನು ಕೇಳುಗರಿಗೆ ತಿಳಿಸುವ ಒಂದು ಕೈಪಿಡಿ ತಯಾರಿಸಿ ಜೊತೆಯಲ್ಲೇ ಇಟ್ಟುಕೊಂಡು ಒದಗಿಸಿ ಸಾರ್ !)

—ಸಂಪಾದಕ



ಎಷ್ಟು ಬೇಡ ಅಂದ್ರೂಕೂಡ, ಪಂಜಾಬೀ ಫುಲ್ಕನೇ ಮಾಡ್ತೀಯಲ್ಲೇ ?

ಮೈಸೂರಲ್ಲಿ ಮಳೆಬಂದಾಗ

—ಜಿ. ಎಸ್. ಜಿ.

"ಏನು ಮಳೆ ಅಂತೀರಾ !— ಗಾಳಿ ಬೇರೆ !"

"ಸೌದೆರೇಟು ತುಂಬಾ ಕಡಿಮೆಯಾಗಿದೆ ಎಂದರೆ"

* * * *

"ಭಾರಿ—ಗಾಳಿ ಮಳೆ ಬಂತಲ್ಲ—ನೀವು ಎಲ್ಲಿದ್ದ್ರಿ ಆಗ ?"

"ನಾನೇ—ಸಂಜೆ ಸಿಟಿಗೆ ಹೋಗಬೇಕಾಗಿತ್ತು—ಐದು ಗಂಟೇಲಿ ಮೋಡ-ಮೋಡ ಇತ್ತಲ್ಲ ?—to be on the safer side ಅಂತ—ಬಾಗಿಲು ಹಾಕಿಕೊಂಡು ಮಲಗಿ ಬಿಟ್ಟೆ—ಎಂಥಾ ಮಳೆ ಅಂತೀರಾ ! ? ಬೆಳಿಗ್ಗೆ ಪೇಪರು ನೋಡ್ದ್ರೇನಿ—ಬಾರಿ ಅನಾಹುತವೇ ಆಗಿ ಬಿಟ್ಟಿದೆ."

* * * *

"ಹಾಳು ಸರ್ಕಾರವೇ ಹೀಗೆ ನೋಡಿ—ದೀಪದ ಕಂಬ—telephone pole ಗಳ ಹತ್ತಿರ ಬೆಳಸ್ತಾರಲ್ಲಾ ಮರಗಳನ್ನ ? !—ಮುಂದಾಲೋಚನೇನೇ ಇಲ್ಲ ನಮ್ಮ ಜನಕ್ಕೆ—ಬೆಳಸಬೇಕಪ್ಪ ಕಾಡ್ನ—ನಿಜ—ಊರಾಚೆ ಬೆಳಸಬೇಕು."

"ಅಲ್ಲವೇ—ಅಲ್ಲವೇ—ಅದೇನು havoc ಅಂತೀರಾ—ಎಲ್ಲಾ mal administration ಉ ಜನತಾ ಬಂದರೇನು ? ಕಾಂಗ್ರೆಸ್ಸು ಬಂದರೇನು—ಸರ್ಕಾರಕ್ಕೆ ತುಕ್ಕು ಹಿಡಿದಿದೆ ಎಂದರೆ."

"ಹೌದು—ಹೌದು—power ಹೋಗಿ ಬಿಟ್ಟು ಎಷ್ಟು ತೊಂದರೆ ಅಂತೀರಾ ಸ್ವಲ್ಪವೂ ಚುರುಕು ಇಲ್ಲ—ಮನೇಲಿ ಹೇಗೆ ಇರಬೇಕಪ್ಪ—power ಇಲ್ಲದೇ ? ದೀಪ ಇಲ್ಲ—fan ಇಲ್ಲ T.V. ಇಲ್ಲ ಹಾಳು ಸರ್ಕಾರ—T.V. ಲಿ "ಹಂಲೋಗ್" ಪ್ರೋಗ್ರಾಂ ಮಿಸ್ ಆಯ್ತು. ನೋಡಿ—ಮಳೆ ನಿಂತು ಒಂದಿನ ಆದರೂ—power ಕೊಡಬೇಡವೇ ? !"

"ಅದೇ ನೋಡಿ—ಬಿಲ್ ಮಾತ್ರ ತಿಂಗಳಿಗೆ ಸರಿಯಾಗಿ ಕಳಿಸಿಬಿಡ್ತಾರೆ."

* * * *

"ನಾನು–ಗಾಳಿ–ಮಳೆ ಬಂದಾಗ ಸಿಟೀಲೇ ಇದ್ದೆ ಎಂದರೆ–ಮಧುನಿವಾಸದಲ್ಲಿ ದೋಸೆ ತಿನ್ನುತ್ತಾ ಇದ್ದೆ–ಒಳ್ಳೇ ಹೊತ್ತಿನಲ್ಲಿ ದೀಪ ಹೋಗಿ ಬಿಟ್ಟಿತು."

"ಹೌದೇ–ಗಟ್ಟಿಗರಪ್ಪ ನೀವು–ಹೇಗೆ ಬಂದಿರಿ ಮನೆಗೆ ?"

"auto ಲಿ–ಕತ್ತಲು ಬೇರೆ–ದಾರೀಲೂ ಮರಗಳು ಬಿದ್ದಿವೆ– ಎತ್ತಿ ಹಾಕೊನೇ ಇಲ್ಲ–ಹತ್ತು ರೂಪಾಯಿ ಕೇಳಿದ."

"ಏನು ಮರ ಎತ್ತೋಕಾ ? ನೀವ್ಯಾಕೆ ? ಅದನ್ನ ಕೇಳವೇದಿಕ್ಕೆ ಹೋದಿರಿ ...."

"ಥತ್ ನಿನ್ನ auto ದವನು ಹತ್ತು ರೂಪಾಯಿ ಕೇಳಿದ್ದು–no regrets- ಅವನು ಮನೆಗೆ ಕರೆದುಕೊಂಡು ಬಂದದ್ದೇ ದೊಡ್ಡದು-ಆದರೂ–ಕತ್ತಲಲ್ಲಿ– auto ಲಿ ಒಬ್ಬನೇ ಬೇರೆ–ಹೆದರಿಕೆ ಎಂದರೆ ! ತುಂಬ ಒಳ್ಳೆಯುವನು,"

"ಯಾರು ?"

"ಅದೇ auto driver –ಸೀದಾ ಮನೆಗೆ ಕರೆದುಕೊಂಡು ಬಂದ ಅಂದರೆ– ಮನೆಗೆ ಬರುವವರೆಗೂ ಎಂಥಾ ಭಯಾ ಅಂತೀರಾ–ಏನಾದರೂ ಮಾಡಿ ಬಿಟ್ಟಿದ್ದರೆ? ಜೇಬಿನಲ್ಲಿ ದುಡ್ಡು ಬೇರೆ ?"

"ಎಷ್ಟಿತ್ತು ದುಡ್ಡು ?"

"ಹೆಚ್ಚಿಲ್ಲ-ಹತ್ತು ರೂಪಾಯಿ ಚಿಲ್ಲರೆ-ಆದರೂ ಹೆದರಿಕೆ ನೋಡಿ–ಮನೆಗೆ ಬಂದವನೇ ದೇವರಿಗೆ ದೀಪ ಹಚ್ಚಿ ಬಿಟ್ಟೆ–ಕರೆಂಟು ಬೇರೆ ಇಲ್ಲ–ಕತ್ತಲು–ಕತ್ತಲು ತುಂಬಾಭಯ ನಮ್ಮಂಥಾ ಗಂಡಸರಿಗೇ ಹೀಗೆ ಆಗುತ್ತೆ ಹೆಂಗಸರ ಗತಿ ಏನು ?"

"ಆದರೂ ನೀವು ಏನೇ ಹೇಳಿ–ಈ auto ದವರು situation ನ exploit ಮಾಡಿ ಬಿಡ್ತಾರೆ–ಹತ್ತು ರೂಪಾಯಿ ಅಂದರೆ–ಹುಡುಗಾಟವೇ ? ಅದಕ್ಕೆ ನೋಡಿ ಈ ಸೀಸನ್‌ನಲ್ಲಿ ನಾನು ಹೊರಕ್ಕೆ ಹೋಗೋದೇ ಇಲ್ಲ."

11

ನಂ ಕ್ಲಬ್ಲಿನಲ್ಲಿ

—ಆನಂದ್

ಮೊನ್ನೆ ದೆಹಲಿಯಿಂದ ಸ್ನೇಹಿತನೊಬ್ಬ ಬಂದಿದ್ದ. ಸಂಜೆ ಕ್ಲಬ್ಲಿಗೆ ಹೋದೆವು. ವರಾಂಡದಲ್ಲೇ ಒಂದು ಬೋರ್ಡು "ಮಕ್ಕಳಿಗೆ ಏಳುಗಂಟೆಯನಂತರ ಪ್ರವೇಶವಿಲ್ಲ" ನನ್ನ ಸ್ನೇಹಿತ 'ಯಾಕೋ ಹೀಗೆ?' ಅಂದ" ಮಕ್ಕಳಿಗೆ ಇಷ್ಟು ಹೊತ್ತಿಗೆ ಹೊಂ ವರ್ಕು ಇತ್ಯಾದಿ ಇರುತ್ತವೆ. ಇಲ್ಲಿ ಕಾಲಹರಣ ಮಾಡಬಾರದು ಕಣೋ" ಅಂದೆ ಪಾನಿಯುಗಳು, ಊಟ ಮುಗಿಯೋ ಹೊತ್ತಿಗೆ ಹತ್ತು ಘಂಟೆ. ಹೊರಗೆ ಬರುತ್ತಾ ಸ್ನೇಹಿತ ಹೇಳಿದ. "ಏಳು ಘಂಟೆ ಆದಮೇಲೆ ದೊಡ್ಡೋರು ಹೇಗೆ ಆಡ್ತಾರೆ ಅನ್ನೋದನ್ನ ಮಕ್ಕಳು ನೋಡದೇ ಇರೋದೇ ವಾಸಿ ಅಲ್ಲವೇನೋ?"

* * * * *

ರಾಜು ಕೋಪದಿಂದ ಹೇಳಿದ. "ನೋಡೋ ಎಸ್ಸೆಸ್ಸೆಲ್ಸಿ ಪ್ರಶ್ನೆ ಪತ್ರಿಕೆ ಲೀಕ್ ಆಗಿದೆ. ಎಷ್ಟು ಜನ ಮಕ್ಕಳಿಗೆ ತೊಂದರೆ! ಸರ್ಕಾರಕ್ಕೆ ಜವಾಬ್ದಾರಿ ಇಲ್ಲ!". ನಾವೆಲ್ಲ ದನಿಗೂಡಿಸಿದೆವು. ಹೀಗಾಗೋದನ್ನ ಹೇಗೆ ತಪ್ಪಿಸಬಹುದು ಅಂತ ಭಾರಿ ಚರ್ಚೆ. ಕೊನೆಗೆ ಸುಮ್ಮನಿದ್ದ ನನ್ನ ಕಡೆ ನೋಡಿದರು. ನಾನು ಹೇಳಿದ್ದು ಇಷ್ಟೆ :— "ಸರ್ಕಾರದವರೇ ನಾಲ್ಕು ತರಹ ಪ್ರಶ್ನೆ ಪತ್ರಿಕೆಗಳನ್ನ ಲೀಕ್ ಮಾಡಿಬಿಡಲಿ, ಅಸಲೀ, ಪರೀಕ್ಷೇಲಿ ಕೊಡಲಿ. ಈ ಗಲಾಟೇಲಿ ಯಾವ ನಕಲೀನೂ ಕೊಳ್ಳದೇ ಇರೋರೇ ಮುಂದೆ ಬರ್‍ತಾರೆ ಪರೀಕ್ಷೇಲಿ !" "ನೀನು ಯಾವಾಗಲೂ ಹೀಗೇ" ಅಂತ ಎಲ್ಲ ಬೈದರು. ಅವರಿಗೆ ಈ ಉಪಾಯ ತೋಚ ಲಿಲ್ಲ ಅಂತ ಅಸೂಯೆ ಅಲ್ವೆ *

* * * * *

ನಕಲೀ ಮಾಲುಗಳಿಗೆ ಮೋಸ ಹೋಗಬೇಡಿ.

—ಅಪ್ರಸ್ತುತ

ಪರೀಕ್ಷೆಗೆ ಕಟ್ಟುವಾಗ ಅಸಲೀ ನಂಬರ್ ಒಂದು ಗುರಪ್ಪನಹಳ್ಳಿ ಕೇಂದ್ರದ ಮಾರ್ಕನ್ನೇ ನೋಡಿ ಕಟ್ಟಿರಿ. ಇತ್ತೀಚೆಗೆ ನಾವು ಕೊಡುವ ಸವಲತ್ತುಗಳನ್ನೇ ನೀಡುತ್ತೇವೆ ಎಂದು ಹೇಳಿ ವಿದ್ಯಾರ್ಥಿಗಳನ್ನು ಅಡ್ಡದಾರಿಗೆಳೆಯುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ.. ಹಾಗೇ ಮೋಸ ಹೋದ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಬಾರದೇ ಪಶ್ಚಾತ್ತಾಪವಾಗಿರುವುದೂ ಕಂಡು ಬಂದಿದೆ. ಇದಕ್ಕೆ ಅನುಭವ ವಿಲ್ಲದಿರುವುದೇ ಕಾರಣ ಎಂದು ಮತ್ತೆ ಹೇಳಬೇಕಾಗಿಲ್ಲ.

ಉದಾಹರಣೆಗೆ ಕಾಟಿಹಳ್ಳಿ, ಪುಟಗಲಳ್ಳಿ, ಹಾಳು ಹುಣಸೆ ಕೇಂದ್ರಗಳಲ್ಲಿ ಅನನುಭವಿ ಮೇಲ್ವಿಚಾರಕರು ಎಲ್ಲ ನ್ಯೂ ಟೈಪುಗಳಿಗೂ ಉತ್ತರ ಬರೆಸುತ್ತಾರೆ, ಇದು ಶುದ್ಧ ತಪ್ಪು. ಹೀಗೆ ಉತ್ತರ ಬರೆಸುವಾಗ ಅಸಲಿ ನೊ–ಆಲ್ ಗಾಯಿಡ ದನ್ನು ಓದಲು ಬರೆಯಲು ಅರ್ಥಮಾಡಿಕೊಳ್ಳಲು ಬರುವ ಕಾರ್ಯಾಲಯ ಸಹಾಯ ಕರ ಅಗತ್ಯವಿದೆ. ಅಂತಹ ಸಹಾಯಕರು ದೊರೆಯುವುದು ನಮ್ಮಲ್ಲಿ ಮಾತ್ರ.

ಇನ್ನೊಂದು ದುರ್ವಿಧಾನವನ್ನನುಸರಿಸಿ ನಕಲೀ ಕೇಂದ್ರಗಳವರು ವಿದ್ಯಾರ್ಥಿ ಗಳನ್ನು ಹಾದಿ ತಪ್ಪಿಸುತ್ತಿದ್ದಾರೆ. ಇದುವರೆಗೆ ಪರೀಕ್ಷೆಗೆ ಕೊಡದಿರುವ ಪ್ರಶ್ನೆಗಳ ಉತ್ತರವನ್ನು ಕಂಡುಹಿಡಿಯಲು, ಮೇಲ್ವಿಚಾರಕರು ಆಯಾ ಶಾಲೆಯ ಬುದ್ಧಿವಂತ ವಿದ್ಯಾರ್ಥಿಗಳನ್ನೇ ಅವಲಂಬಿಸಿ, ಆ ಲೆಕ್ಕಗಳನ್ನು ಮಾಡುವಂತೆ ಆ ವಿದ್ಯಾರ್ಥಿಗಳನ್ನು ಪರೀಕ್ಷಾ ಭವನದಲ್ಲಿ ಒತ್ತಾಯಿಸುತ್ತಿದ್ದರು. ಇದು ಅನಗತ್ಯ. ತಮಗೆ ಬಂದ ಉತ್ತರಗಳನ್ನೇ ಬರೆದು ಪ್ರತಿಮಾಡಿ ಹಂಚಲು ಇರುವ ಸಮಯದ waste ಇದು, ಶೇ 40 ಕೊಡಾಬೇಕಿಲ್ಲ, 35 ಸಾಕು. ಹೊಸ ಪ್ರಶ್ನೆಗಳಿಗೆ ಉತ್ತರವೇ ಬೇಕಿಲ್ಲ. ಹೊಸಜ್ಜಿ ಹಳ್ಳಿ ಕೇಂದ್ರದಲ್ಲಿ ಅನಕ್ಷರಸ್ಥರಾದ ವಿದ್ಯಾರ್ಥಿಗಳ ಉತ್ತರವನ್ನು ತಂದೆ ತಾಯಿ ಬಂಧು ಬಳಗದವರಿಂದ ಬರೆಸಿಕೊಡುವ ಇತಿಹಾಸಪೂರ್ವ ಅನಾಗರಿಕತೆ, ಅವೈಜ್ಞಾನಿಕ ಪದ್ಧತಿಯನ್ನೇ ಅನುಸರಿಸುತ್ತಿರುವುದು ಕಂಡು ಬಂದಿದೆ. ವಿದ್ಯಾರ್ಥಿ ಗಳು ತಮಗೆ ಬಂದ ಚೀಟಿಯನ್ನು ನಕಲು (engrave) ಮಾಡಲು ಎಂದರೆ ಕೆತ್ತಲು, ಬರದವರಾದರೇ ಅಂತಹ ಸೋಮಾರಿಗಳಿಗೆ ಪ್ರೋತ್ಸಾಹ ಕೊಡಬಾರದೆಂಬ ನಮ್ಮ ಗಟ್ಟಿ ನಿರ್ಧಾರವೆ ನಮ್ಮ ಯಶಸ್ಸಿನ ರಹಸ್ಯ. ಕೇಂದ್ರವು ಹಲವಾರು ಆಕರ್ಷಣೆ ಗಳನ್ನು ಹೊಂದಿದೆ.

೧) ವಿಶಾಲವಾದ ಮೈದಾನ ಕಲ್ಲು ತಂತಿ ಬೇಲಿಯಿಂದ ಭದ್ರವಾಗಿ ರಕ್ಷಿಸಲ್ಪಟ್ಟಿದೆ. ಒಂದೇ ದ್ವಾರ.

೨) ದ್ವಿತೀಯ ಬೇಲಿ, ಒಳಗಿದೆ. ಪಕ್ಕದಿಂದ ಏಕೈಕ ಪ್ರವೇಶ.

೩) ಒಂದೇ ದ್ವಾರವುಳ್ಳ ಕೇಂದ್ರ ಕಟ್ಟಡದ ವಿನ್ಯಾಸವು ಅತ್ಯಾಧುನಿಕ ಅಭಿಯಂತರಿಂದ ತಯಾರಿಸಿದ್ದು.

೪) ಇಂಟರ್‌ಕಾಂ ಪದ್ಧತಿ ಯಾವುದೇ ಕೋಣೆಯಿಂದ ಉಳಿದೆಲ್ಲ ಕೋಣೆಗಳಿಗೂ ಟೆಲಿಫೋನ್ ಸೌಕರ್ಯ.

೫) ಸ್ಕ್ವಾಡ್, ಹಾಗೂ ನಿರೀಕ್ಷಕರನ್ನು handle ಮಾಡುವುದರಲ್ಲಿ ವಿಶೇಷ ತೆರಬೇತಿ ಇರುವ ಸಿಬ್ಬಂದಿ.

೬) ಅತ್ಯಾಧುನಿಕ ಗ್ಸೆರಾಕ್ಸ್, ಕಾಪಿಯರ್ ಇನ್ನಿತರ ಸೌಲಭ್ಯಗಳು ಪ್ರಶ್ನ ಪತ್ರಿಕೆ ಔಟಾಗುವಂತೆ ಮಾಡುವುದು ಅರ್ಥಹೀನ.

೭) ಓದಲು ಬರುವ, ಬರೆಯಲು ಬರುವ ವಿದ್ಯಾರ್ಥಿಗಳಿಗೆ ಶೇ. ೧೦ ರಿಯಾಯಾತಿ. ಉಕ್ತಲೇಖನವನ್ನು ಕರಾರುವಾಕ್ಕಾಗಿ ತೆಗೆದುಕೊಳ್ಳ ಬಲ್ಲವರಿಗೆ ಶೇ. ೨೫ ರಿಯಾಯತಿ.

ಸಿನಿಮಾ, ಕ್ಯಾಬರೇ, ಟಿ.ವಿ. ಗಳಲ್ಲೇ ಮಗ್ನರಾಗಿದ್ದು, ಷೂರ್ ಆಗಿ ಪಾಸು ಮಾಡಲು ಸಾಧ್ಯವಿರುವ, ನಮ್ಮ ಸುಸಜ್ಜಿತ ಕೇಂದ್ರದಲ್ಲಿ ಬರುವ ಸೆಪ್ಟಂಬರ್, ಮುಂದಿನ ಮಾರ್ಚಗಳಿಗೆ ಎಲ್ಲಾ ಸೀಟುಗಳು ಭರ್ತಿಯಾಗಿವೆ. 86 ರ ಸೆಪ್ಟಂಬರ್ 87ರ ಮಾರ್ಚಗಳಿಗೆ ರಿಸರ್ವೇಷನ್‌ಗಾಗಿ ಇಂದೇ ಸಂಪರ್ಕಿಸಿ.

ಒಂದು ಕಿವಿ ಮಾತು : ನಿಮ್ಮ ಮಕ್ಕಳು ಯಾವುದೇ ಕೋರ್ಸಿನ ಮೊದಲ ವರ್ಷಕ್ಕೆ ಅಡ್ಮಿಟ್ ಆದೊಡನೆ ನಮ್ಮ ಕೇಂದ್ರದಲಿ ಅವರಿಗೆ ಸ್ಥಳ ಮೀಸಲಾತಿ ಮಾಡಿ ಕೊಳ್ಳುವುದು ವಿವೇಕಯುತ ವರ್ತನೆ. ನಿಮ್ಮ ಮಕ್ಕಳ ಭವಿಷ್ಯ ಭದ್ರಪಡಿಸಿ. ನಕಲಿ ಮಾಲುಗಳಿಗೆ ಮೋಸ ಹೋಗ ಬೇಡಿ,

ವಿಶೇಷ ಸೂಚನೆ :

ಚೂರಿ, ಸೈಕಲ್ ಚೈನ್, ಆಸಿಡ್ ಬಲ್ಬ್, ಮೊದಲಾದ ಹಿಂಸೆಯ ಉಪಕರಣಗಳಾಗಲಿ, ಸಾಮೂಹಿಕ ದೊಂಬಿಗಳಾಗಲಿ ಪರೀಕ್ಷಾ ಸಮಸ್ಯೆಗೆ ಪರಿಹಾರಗಳಲ್ಲ. ನಮ್ಮ ಅಸಲೀ ಅಹಿಂಸಾ ಪದ್ಧತಿಯನ್ನು ಅನುಸರಿಸಿ.

(ಜಾಹಿರಾತಲ್ಲ)

ಮೌಲ್ಯಗಳು !

—ಸೋಮಿ

ಮಾನ್ಯ ಮುಖ್ಯ ಮಂತ್ರಿಗಳು ಮೌಲ್ಯಾಧಾರಿತ ರಾಜಕೀಯದ ಮಾತ ನ್ನಾಡಿದರು, ಅವರಿಗೇ ತಿರುಗುಬಾಣವನ್ನೋ ಏನೆನ್ನೋ ಮಾಡಿ ಕನ್ನಡಿಗರೊಬ್ಬರು ಬರೆದಿದ್ದಾರೆ. ಅವರು ಎಂದರೆ ಮು.ಮಂ.ಗಳು ಮಠದಲ್ಲಿ ಹಣ್ಣು ಕಾಯಿ ಮಾಡಿಸಿದ್ದು ಮೌಲ್ಯವನ್ನು ಧಿಕ್ಕರಿಸಿದಂತಾಗಿವೆ ಎಂಬ ಗುಲ್ಲೆಬ್ಬಿಸಿದ್ದಾರೆ:

ಮೌಲ್ಯವೆಂದರೇನು ಎಂಬುದು ತಿಳಿಯದವರಿಗೆ ಮಠದಲ್ಲಿ ಹಣ್ಣು ಕಾಯಿ ಮಾಡಿಸುವುದು ಮೌಲ್ಯವಲ್ಲ ಎಂಬ ಅಭಿಪ್ರಾಯ ಮೂಡಿಸಲು ಇದು ಸಹಕಾರ ಮಾಡಿದೆ. ಭಾರತ ಸಂವಿಧಾನದಲ್ಲಿ ಕೊಟ್ಟ ಪ್ರಜಾ ಸ್ವಾತಂತ್ರ್ಯಕ್ಕೆ- ಈ ಅಭಿ ಪ್ರಾಯ ಮೌಲ್ಯಗಳ ಹೆಸರಿನಲ್ಲಿ ಬೇರೊಂದು ದೃಷ್ಟಿಕೋನವನ್ನು ನೀಡಿದೆ. ಹಾಗಾದರೆ ರಾಜಕೀಯದಲ್ಲಿದ್ದವರು ಹಣ್ಣುಕಾಯಿ ಮಾಡಿಸಿದರೂ ತಪ್ಪು ಮಾಡಿ ದಂತಾಯಿತು ಎಂದು ಹೇಳಲಾಗದಿದ್ದರೂ, ಮೌಲ್ಯಗಳನ್ನು ತಪ್ಪಾಗಿ ಅರ್ಥೈಸಿದಂತಾ ತ್ತದೋ ಏನೋ ಅಥವಾ ಆಕ್ಷೇಪಣಾಕಾರರು ತಿಳಿದುಕೊಂಡಂತೆ ರಾಜಕೀಯ ಮೌಲ್ಯಯಾವುದು ಎನ್ನುವುದನ್ನು ಹಣ್ಣುಕಾಯಿ ಮಾಡಿಸುವವರು ಅರ್ಥ ಮಾಡಿಕೊಳ್ಳದೆ ಮಹಾಪರಾಧ ಮಾಡಿದರೋ ಏನೋ ? ಇಲ್ಲಿಯ ಸೂಕ್ಷ್ಮಗಳು ತಿಳಿಯದೆ ಮೌಲ್ಯಗಳಿಗೆ ಹಣ್ಣುಕಾಯಿ ನೀರು ಗಾಯಿಯಾಗಿದೆ ಎಂದು ನಿರ್ಧರಿ ಸುವುದೂ ಒಂದು ದಾರಿ.

ಇದಕ್ಕೆ ಎಂದರೆ ಈ ಆಕ್ಷೇಪಣೆಗೆ ಒತ್ತು ಕೊಡುವಂತೆ, ಇನ್ನೊಬ್ಬ ಹಿರಿಯ ರಾಜಕಾರಣಿಗಳು ತಾವು ಭಾರತೀಯರು, ಮೊದಲು ಎರಡು ಹೊತ್ತು ಪೂಜೆ ಮಾಡುತ್ತಿದ್ದುದನ್ನು ಬಿಟ್ಟಿದ್ದೇನೆ ಎಂದು ಹೇಳಿಕೆ ಕೊಟ್ಟಿದ್ದಾರೆ. ರಾಜಕೀಯಕ್ಕೆ ಹೋಗುವವರು ಪೂಜೆ ಮಾಡುವುದು ಭಾರತೀಯರ ಲಕ್ಷಣವಲ್ಲ ಎಂದು ಭ್ರಮಿ ಸಿದರೆ ಯಾರು ಏನುಮಾಡುವಹಾಗಿದೆ, ಮಾಡುವ ಪೂಜೆಯನ್ನು ಬಿಡುವುದು ಭಾರತೀಯ ಲಕ್ಷಣವೇ ? ದೇವರು ಗುರುಗಳು ಎಂದು ಜನ ತಿಳಿದು ಕೊಂಡದ್ದು ಯಾವ ಸ್ವರೂಪದ್ದೇ ಆಗಿರಲಿ, ಅದನ್ನು ಅಲ್ಲಗಳೆಯುವವರ ಗುರುಗಳು ಯಾರು, ಯಾವ ಮಠದವರು ಎಂಬುದು ಕುತೂಹಲಕರವಾದ ಅಂಶ. ದೇವರು ಇಲ್ಲ ವಾದರೆ ಸರಿಯೆಂಬುದೂ ಇಲ್ಲ, ತಪ್ಪೂ ಇಲ್ಲ. ಹಾಗಾದಲ್ಲಿ ಒಂದು ಸರೀಸೃಪವನ್ನು

ಇನ್ನೊಂದು ನುಂಗುವ ಜಂಗಲೀ ನ್ಯಾಯವೇ ನ್ಯಾಯ ಎಂದು ದಾಸ್ತೊವಸ್ಕಿ ಹೇಳಿರುವುದು ಅಧ್ಯಯನಯೋಗ್ಯವಾದ ಮಾತಾಗುತ್ತದೆ.

ಬರೀ ಮೌಲ್ಯಗಳ ಮಾತು ಏಕೆ ? ಎಲ್ಲಾ ಶಬ್ದಗಳ ಕತೆಯೂ ಅದೇ. ಅವು ಬರಿಯ ಶಬ್ದಗಳೋ ಮೌಲ್ಯಗಳೋ ಎಂಬುದೂ ವಿವಾದಕ್ಕೆಡೆಗೊಡಬಲ್ಲುದು.

ಉದಾಹರಣೆಗೆ ಸಮಾನತೆ : ಹೇಗೆ ಸಮಾನತೆ? ದೇಶದ ಪರಿಷ್ಕ್ರರಾಗಲೀ, ಪಕ್ಷದ ಕಾರ್ಯಕಾರೀ ಸಮಿತಿಯ ಸದಸ್ಯರಾಗಲೀ ಜನಸಾಮಾನ್ಯನಿಗೆ ಸರಿಯಾಗಿರುವುದು ಎಲ್ಲಿ ಕಂಡು ಬಂದಿದೆ?

ಮುಖ್ಯ ಮಂತ್ರಿಯಾದವನು ಒಂದು ಕಾಯೊಡೆಸಿದ್ದೂ ತಪ್ಪಾದರೆ, ಸ್ವಾತಂತ್ರ್ಯಕ್ಕೆ ಏನರ್ಥ ಉಳಿಯಿತು. ಮಂತ್ರಿಗಳಿಗೆ ಸಿಕ್ಕ ಸವಲತ್ತು. ಕೂಲಿಗಾರರಿಗೂ, ನಿರುದ್ಯೋಗಿಗಳಿಗೂ ಸಿಕ್ಕುತ್ತಿಲ್ಲ ಎಂದು ವಾದಿಸಿದರೆ, ಸರಕಾರ ಒಪ್ಪಿಕೊಂಡು ಅಂತಹ ಸವಲತ್ತು ಕೊಟ್ಟದ್ದು ಯಾವ ದೇಶದಲ್ಲಿ ಕಂಡು ಬಂದಿದೆ?.

ಇನ್ನು ಸಮಾನತೆ ಬರುವವರೆಗೆ ಮೀಸಲಾತಿ ಇರಲಿ ಎಂದೂ, ಈಗಿಂದೀಗಲೇ ಮೀಸಲಾತಿ ಹೋಗಲಿ ಎಂದೂ ಕೂಗುಗಳು ಕೇಳುತ್ತಿವೆಯಷ್ಟೇ, ಈ ಕೂಗುಗಳು ಯಾವ ಮೌಲ್ಯಾಧಾರ ಹೊಂದಿವೆ? ಪರಸ್ಪರ ನಿಂದೆ ಜಗಳ, ದೊಂಬಿಗಳಿಗೆ ಎಡೆ ಕೊಟ್ಟಿವೆಯೇ ಹೊರತು ನಿದಿಷ್ಟ ಚಿತ್ರ ಯಾರಿಗೂ ಗೊತ್ತಿಲ್ಲ. ಸಮಾನತೆ ಬರಲಿಲ್ಲ, ಮೀಸಲಾತಿ ನಿಲ್ಲಲಿಲ್ಲ, ಪ್ರತಿಭೆಗೆ ಪುರಸ್ಕಾರ ಸಿಗಲಿಲ್ಲ ದೇಶದ ಗತಿಯೇನು! ಮೀಸಲಾತಿನಿಲ್ಲಿಸಿ ಶೋಷಕರ ಕೈಬಲಪಡಿಸುವುದು ಶುದ್ಧ ತಪ್ಪು! ಯಾವುದನ್ನು ಯಾವ ಮೌಲ್ಯದಿಂದ ಅಳೆಯಬೇಕು ಹೇಳಿ!

ಇಷ್ಟು ಅಲ್ಲದೆ ಮೌಲ್ಯಗಳು ತಾತ್ಕಾಲಿಕವೋ, ಶಾಶ್ವತವೋ ಎಂಬ ಜಿಜ್ಞಾಸೆ ಇನ್ನೂ ನಿಂತಿಲ್ಲ. ಕಾಗೆಗಳಿಗೆ ಮೌಲ್ಯವಾದದ್ದು ಗೂಗೆಗಳಿಗೆ ಅಪಮೌಲ್ಯ ಕೊಕ್ಕರೆಗೆ ಮೌಲ್ಯವಾದದ್ದು ಮೀನಿಗೆ ಅಪಮೌಲ್ಯ, ಅಷ್ಟು ಅಲ್ಲದೆ ಕೊಕ್ಕರೆಗೆ ಧ್ಯಾನ ಮಾಡುವಾಗ ಇರುವ ಮೌಲ್ಯವೇ ಬೇರೆ? ಮೀನನ್ನು ಮೀನುನುಂಗಿದರೆ ಮೀನಿಗೆ ಮೌಲ್ಯ. ಕೊಕ್ಕರೆನುಂಗಿದರೆ ಶೋಷಣೆ!

ಇಂತಹ ಸಂದರ್ಭದಲ್ಲಿ ಮೌಲ್ಯಗಳ ಮಾತಾಡುವವರು ತಾವು ಯಾವ ಮೌಲ್ಯಗಳನ್ನು ಮನ್ನಿಸುತ್ತೇವೆ ಯಾವನ್ನು ಮನ್ನಿಸುವುದಿಲ್ಲ ಎಂದು ಮೊದಲ

ಪಾಲಿಸಿ ಸ್ಟೇಟ್‌ಮೆಂಟ್ ಕೊಟ್ಟರೆ ಅವರವರ ಪಾರ್ಟಿಯವರು ಮುಕ್ತ ಚರ್ಚೆಯಲ್ಲಿ ಮತ್ತು ಕೃತಿಯಲ್ಲಿ ತೊಡಗಲು ಅನುಕೂಲವಾಗುತ್ತದೆ. ನಮ್ಮಂಥವರಿಗೆ ಹಿಡಿದ ಕವಡು ತಪ್ಪಿ ಏನು ಯಾಕೆ ಅಂತ ತಿಳಿದು ಮನಸ್ಸು ಹಳಾರವಾಗುತ್ತದೆ. ಮನಸ್ಸು ಹಳಾರ ಮಾಡಿಕೊಳ್ಳುವುದು, ತೆಂಗಿನಕಾಯಿ ಒಡೆಸಿದಷ್ಟೇ ಅಬದ್ಧ ಎಂದರೆ—**no comments.**

ಚುನಾವಣೆಯ ನಂತರ............



ನಾ ಸೋತರೂ ಪರವಾಗಿಲ್ಲ! ಕಣೆ ಆ ಚುಡಾಲುಂದು ಠೇವಣೀನೇ ಹೋಯ್ತಲ್ಲ...

ಭಾವ ಸಮಾಧಿ

—ಶಿವು

ನೋಡಿ , ನನ್ನದು ಒಂದೇ ಸೂತ್ರ. ದೇವರು ಕೊಟ್ಟಿರೋ ಈ ದೇಹಾನ ಆದಷ್ಟು ಮಟ್ಟಿಗೆ ಜೋಪಾನವಾಗಿ ಕಾಪಾಡಿಕೊಂಡು, ಶಕ್ತಿ ಇರೋ ಅಷ್ಟು ದಿನ, ನಮ್ಮ ಬುದ್ಧಿಗೆ ತೋಚಿದ ಹಾಗೆ ಒಳ್ಳೆ ಮಾರ್ಗದಲ್ಲಿ ನಡೀ ಬೇಕೂಂಬೋದೇ ಜೀವನದ ಮರ್ಮ ಅಂತ ನಂಬಕೊಂಡಿರೋನು ನಾನು. ನನಗೆ ಈಗ ನಲವತ್ತೈದು ನಡೀತಾ ಇದೆ. ನಲವತ್ತೈದರ ನಂತರ, ವರ್ಷಕ್ಕೊಮ್ಮೆಯಾದರೂ ದೇಹವನ್ನು ಸಂಪೂರ್ಣವಾಗಿ ಪರೀಕ್ಷೆಗೆ ಒಳಪಡಿಸಿ, ದೇಹದ ಎಲ್ಲ ಅವಯವಗಳೂ ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೋ ? ಏನಾದರೂ ಕೆಡೋ ಸೂಚನೆ ಇದ್ರೆ ತಕ್ಷಣ ದುರಸ್ತಿಗೆ ಏರ್ಪಡಿಸೋದೇ ಜಾಣತನ. ಈಚೀಚೆಗಂತೂ ಯಾವ ಪತ್ರಿಕೆ ನೋಡಿದ್ರೂ ಆರೋಗ್ಯದ ಬಗ್ಗೆ ಒಂದಲ್ಲಾ ಒಂದು ಬರಹ ಇದ್ದೇ ಇರುತ್ತೆ. ಓದು ಬರದಿದ್ರೆ ಒಂದು ತರ. ಓದು ಬಂದೂ, ಇದನ್ನೆಲಾ ಓದಿ ಎಚ್ಚರಿಕೆ ವಹಿಸ್ದೆ ಇದ್ರೆ ಯಾರದ್ರೀ ತಪ್ಪು ? ನಾನಂತೂ ಯಾವ ಪತ್ರಿಕೇನಾದ್ರೂ ಆಗ್ಲಿ, ಹೃದಯಾಘಾತ, ಬಿ.ಪಿ., ಕ್ಯಾನ್ಸರ್, ಇವುಗಳ ಬಗ್ಗೆ ಏನಿದ್ರೂ ಸಹ, ಒಂದಕ್ಷರ ಬಿಡದೇ ಓದಿ ನನಗೇನಾದ್ರೂ ಆ ಲಕ್ಷಣಗಳಿವೆಯೋ ಅಂತ ಚೆನ್ನಾಗಿ ಪರಿಶೀಲಿಸಿಕೊಂಡು, ಅಂತಹದೇನಾದರೂ ಸೂಚನೆಗಳಿದ್ರೆ ತಕ್ಷಣ ನಮ್ಮ ಕಾರ್ಖಾನೆ ವೈದ್ಯರ ಹತ್ತಿರ ಓಡೇ ಬಿಡ್ತೇನೆ. ನಮ್ಮ ಡಾಕ್ಟರು ತೀರಾ ಒಳ್ಳೆಯೋರು. ನಗು ನಗುತ್ತಾನೇ "ರೀ, ನಿಮಗೇನೂ ಆಗಿಲ್ಲಾರೀ, ಸುಮ್ನೆ ಕೆಲಸ ಮಾಡ್ಕೊ ಹೋಗಿ." ಅಂತ ಹೇಳ್ತಾನೇ ಇರ್ತಾರೆ. ಆದ್ರೂ ಅವ್ರು ಕೆಲವು ಸಲ "ಹೈಪೋ ಕಾಂಡ್ರಿಯಾಕ್ ಅಂದ್ರೇನು ಗೊತ್ತೇನ್ರಿ ?" ಅಂತ ಚುಡಾಯಿಸುತ್ತಾರೆ. ನನಗ್ಗೊತ್ತಿಲ್ವೆ 'ಹೈಪೋ ಕಾಂಡಿ ಯಾಕ್' ಅಂದ್ರೆ ಏನೂಂತ ! ಅವನ ಸಮಾಧಿ ಶಿಲೆ ಮೇಲೆ ಬರೆಸಿಟ್ಟಿದ್ನಂತೆ "I told you so" ಅಂತ.

ಮೊನ್ನೆ ನೋಡಿ, ಮಹರ್ಷಿ ಪರಮಾತ್ಮಾನಂದಜೀ ಅವರು "ಭಾವ ಸಮಾಧಿ ಯೋಗ" ದ ಮೇಲೆ ಒಂದು ಕಮ್ಮಟ ಏರ್ಪಡಿಸಿದ್ದರು. ನನ್ನ ಮಿತ್ರ ಸಚ್ಚಿ "ನಿನ್ನ ಆತಂಕ ಪ್ರವೃತ್ತಿಗೆ ಇದು ಒಳ್ಳೇ ಚಿಕಿತ್ಸೆ" ಅಂತ ಹೇಳಿ ಬಲವಂತದಿಂದ ನನ್ನ ಕರೆಕೊಂಡು ಹೋಗಿದ್ದ, ಸಂಜೆ ಆರೂ ಮೂವತ್ತು ಘಂಟೆಗೆ ಸ್ವಾಮೀಜೀಯವರ ಮೊದಲ ಉಪನ್ಯಾಸ. ದೊಡ್ಡ ಸಭಾಂಗಣ. ನೆಲದ ಮೇಲೆ ದೊಡ್ಡ ಜಂಖಾನೆ.

ಒಂದು ಅಂಚಿನಲ್ಲಿ ಒರಗು ದಿಂಬುಗಳ ಆಸರೆಯಲ್ಲಿ ಸ್ವಾಮೀಜೀ ಹಾಗೂ ಅವರ ಆಸ್ಟ್ರೇಲಿಯನ್ ಶಿಷ್ಯೆ ಉಪಸ್ಥಿತರಾಗಿದ್ದರು. ನಾವೂ ಕುಳಿತೆವು. ಹಾಳು ಕುರ್ಚೀ ಮೇಲೆ ಕೂತು, ಕೂತು. ನೆಲದ ಮೇಲೆ ಕೂರೋ ಅಭ್ಯಾಸನೇ ತಪ್ಪಿ ಹೋಗಿತ್ತು. ವಿಧಿಯಿಲ್ಲ. ಕೂತೆವು. ಸ್ವಾಮೀಜೀಯವರು ಬಹಳ ಪ್ರತಿಭಾವಂತರು. ಆಧುನಿಕ ಸಮಾಜದ ಕ್ಲಿಷ್ಟ ಸಮಸ್ಯೆಗಳಿಂದಲೇ ಉಪನ್ಯಾಸನ ಪ್ರಾರಂಭಿಸಿದರು. "ಅಂತರ್ ಮೌನ" ದ ಬಗ್ಗೆ ಅವರು ಪ್ರಸ್ತಾಪಿಸುವಹೊತ್ತಿಗೆ, ನನ್ನ ಎಡಗಾಲು ಯಾಕೋ ಒಂದು ವಿಚಿತ್ರ ಭಂಗಿಯಲ್ಲಿ ಸೊಟ್ಟಗೆ ಮಲಗಿತ್ತು. ಯಾವ ವಿಧವಾದ ಫೀಲಿಂಗ್ ಇಲ್ಲದೇ ಮರಗಟ್ಟಿದಂತಿತ್ತು. ಜೋಮು ಹಿಡಿದಿರಬಹುದೇ ? ಹಾಗಾಗಿದ್ದರೆ, ಸ್ವಲ್ಪ ಜರುಗಿಸಿದರೆ, ಕಾಲೆಲ್ಲಾ ಚುಮು ಚುಮು ಗುಟ್ಟಬೇಕು. ಸ್ವಲ್ಪ ಜರುಗಿಸಿದೆ. ಉಹುಂ ! ಯಾರದೋ ಬೇರೆ ಕಾಲು ಚಲಿಸಿದ ಹಾಗಾಯಿತು. ಅಷ್ಟು ಹೊತ್ತಿಗಾಗಲೇ ಸ್ವಾಮೀಜೀಯವರು, ಸಭಿಕರಿಗೆಲ್ಲಾ ಮೌನ ದೀಕ್ಷೆಯನ್ನು ಕೊಟ್ಟು ಐದು ನಿಮಿಷ ಮನಸ್ಸಿನಿಂದ ಎಲ್ಲಾ ಭಾವನೆ ಗಳನ್ನು ದೂರ ಮಾಡಿ, ದೇಹವನ್ನು ಪೂರ್ಣವಾಗಿ ಸಡಿಲ (relax) ಗೊಳಿಸಬೇಕೆಂದು ಕರೆಯಿತ್ತಿದ್ದರು, ಮೊದಲೇ ಪೂರ್ಣವಾಗಿ ಸಡಿಲಗೊಂಡು, ದೇಹದ ನಿಯಂತ್ರಣದಿಂದ ಬೇರ್ಪಡಲು ಹಾತೊರೆಯುತ್ತಿದ್ದ ನನ್ನ ಎಡಗಾಲಿಗೆ ಇನ್ನೂ ಸಡಿಲವೇ ? ದೇವರೇ ಗತಿ ! ಹೇಗಾದರೂ ಮಾಡಿ ನಿಂತುಕೊಂಡು. ಕಾಲಿನಲ್ಲಿ ರಕ್ತ ಸಂಚಾರ ಪ್ರಾರಂಭವಾಗೋ ಹಾಗೆ ಮಾಡಿ, ನರಗಳಿಗೆ ಜೀವ ತುಂಬಿದರೆ ನಾನು ಬಚಾವ್, ಇಲ್ಲಾಂದೆ stroke ಹೊಡೆದು.......... ಮುಂದಿನ ಪರಿಣಾಮನ ಊಹಿಸುವುದಕ್ಕೂ ಹೆದರಿಕೆ. ಎದೆ ಢವಗುಟ್ಟುಕ್ಕೆ ಶುರು. ಒಮ್ಮೆಲೇ ಎದ್ದು ಹೋಗುವ ಮುಂಚೆ ಸಚ್ಚಿಗಾದರೂ ಹೇಳಿ ಹೋಗಬೇಕಲ್ಲ. ಆವನೋ ಭಾವ ಸಮಾಧಿಯಲ್ಲಿ ಮುಳುಗಿದ್ದಾನೆ. ಏನಾದ್ರೂ ಆಗ್ಲಿ ಅಂತ ಧಡಕ್ಕಂತ ಎದ್ದೇ ಬಿಟ್ಟೆ. ಕಾಲು ಕುಸೀಲಿಲ್ಲ. ದೇವರು ದೊಡ್ಡವನು. ಹಿಂದೆ ನೋಡದೇ ಮನೆಗೆ ನಡೆದೆ.

ಯಾಕೆ ಹೇಳುಕ್ಕೆ, ಬಂದೆ ಅಂದ್ರೆ ನಮ್ಮ ಆರೋಗ್ಯದ ಬಗ್ಗೆ ನಾವೇ ಆಸ್ಥೆ ವಹಿಸದಿದ್ರೆ, ಏನಾದ್ರು ಹೆಚ್ಚು ಕಮ್ಮಿ ಆದ್ರೆ ಯಾರು ಹೊಣೆ ?

* * * *

ಅಭಿಪ್ರಾಯ ಬೇಧ

ಗಂಡ ಹೆಂಡತಿಯರಿಬ್ಬರಿಗೂ ಪರಸ್ಪರ ಅಭಿಪ್ರಾಯ ಬೇಧ ಇದ್ದರೂ,
ಗಂಡ ಮಾತ್ರ ಯಾವಾಗಲೂ ಅದರ ಬಗ್ಗೆ ಹೆಂಡತಿಗೆ ಹೇಳುತ್ತಿರುವುದಿಲ್ಲ.

ಪಾರ್ಟಿ ಏಕಾಗಿ ?

ಪ್ರೊ. ನಾ. ಜಯಂಕೇಸರಿ

ವಿಶ್ವ ಬಂದವನೇ, 'ರೆಡೀನಾ ಮಾವ, ಹೋಗೋಣ್ವಾ' ಅಂದ. ಪೆಚ್ಚಾಗಿ 'ಎಲ್ಲಿಗಯ್ಯಾ' ಎಂದೆ. ಸರಿಹೋಯ್ತು. ಏನ್ಮಾವಾ ಹೀಗ್ಹೇಳ್ತಿಯಾ ? ಇವತ್ತು ಸಂಜೆ ಖಾದಿಯಪ್ಪನವರ ಮನೇಲಿ ಪಾರ್ಟಿ ಅಲ್ವಾ ? ಆರು ಗಂಟೆಗೇ ಬರ್ತೀನಿ. ರೆಡಿ ಆಗಿರ್ಲಿ ಮಾವ ಹೇಳ್ಬಿಡಿ' ಅಂತ ಅತ್ತೇಗೆ ಹೇಳಿದ್ದೆ. ಹೇಳ್ಲಿಲ್ವಾ ? " ಎಂದು ನನ್ನ ಉತ್ತರಕ್ಕೆ ಕಾಯದೇ "ಅತ್ತೆ ಹೇಳಿರ್ತಾಳೆ. ಆದ್ರೆ ನೀನು ಅಬ್ಸೆಂಟ್ ಮೈಂಡೆಡ್ ಪ್ರೊಫೆಸರ್. ನಿನಗೆಲ್ಲಿ ಜ್ಞಾಪಕ ಇರುತ್ತೆ. ಸರಿ ಸರಿ. ಏಳು ಹೊತ್ತಾಯ್ತು" ಅಂತ ಬಲವಂತವಾಗಿ ಎಬ್ಬಿಸಿ ರೆಡಿಯಾಗಿಸಿ ನನ್ನನ್ನು ಹೊರಡಿಸಿದ ವಿಶ್ವ.

ವಿಶ್ವ ನನ್ನ ಸೋದರಳಿಯ. ತುಂಬಾ ಬುದ್ಧಿವಂತ. ಇಂತಹ ವಿಚಾರ ಅವನಿಗೆ ಗೊತ್ತಿಲ್ಲಾಂತಿಲ್ಲ. ವಿಶ್ವ ಅಂದ್ರೆ ನನ್ನ ಎನ್‌ಸೈಕ್ಲೋಪಿಡಿಯಾ.

ದಾರೀಲಿ ವಿಶ್ವನ್ನ ಕೇಳಿದೆ. "ಅದು ಸರಿ. ಖಾದಿಯಪ್ಪನವರ ಮನೇಲಿ ಪಾರ್ಟಿ ಏಕಾಗಿ ಎಂದೆ.

ವಿಶ್ವ "ಅದೇ ಎಲೆಕ್ಷನ್ ರಿಸಲ್ಟ್ ಬಂತಲ್ಲಾ" ಅಂದ. ಹುಬ್ಬೇರಿಸಿದೆ. ಅವನೇ ಶುರು ಮಾಡ್ದ. "ನಂಗೊತ್ತು ಮಾವ, ನಿನ್ನ ಮುಂದಿನ ಪ್ರಶ್ನೆ ಏನೂಂತ" ಸರೀ ಕೇಳು. "ಈ ಎಲೆಕ್ಷನ್‌ನಲ್ಲಿ ಸ್ಪರ್ಧಿಸಿದ್ದವರು ಟೋಪಣ್ಣಯ್ಯ, ಖಾದಿಯಪ್ಪ ಚಮಚೇಶ ಹಾಗೂ ಕಮಲಾಪತಿ. ಇಲ್ಲಿ ನಡೆದಿದ್ದು ಕ್ವಾಡ್ರ್ಯಾಂಗಲ್ ಕಾಂಟೆಸ್ಟ್. ಸರಿ, ಗೊತ್ತಾಯ್ತು' ಎಂಬಂತೆ ತಲೆಯಾಡಿಸಿದೆ. ಟೋಪಣ್ಣಯ್ಯ ಆಳುವ ಪಕ್ಷದಿಂದ, ಖಾದಿಯಪ್ಪ ವಿರೋಧ ಪಕ್ಷದಿಂದ, ಚಮಚೇಶ ಹಾಗೂ ಕಮಲಾಪತಿ ಪಕ್ಷೇತರರಾಗಿ ಸ್ಪರ್ಧಿಸಿದ್ದರು. "ಸರಿ ಮುಂದೆ ಹೇಳು" ಎಂದೆ..

ಟೋಪಣ್ಣಯ್ಯ, ಖಾದಿಯಪ್ಪ ಒಟ್ಟಿಗೇ ಒಂದೇ ಪಾರ್ಟಿಯಲ್ಲಿದ್ದವರು, ಪಕ್ಷ ಹೋಳಾದ ಮೇಲೆ ಇಬ್ಬರೂ ವಿರೋಧಿಗಳು. ಟೋಪಣ್ಣಯ್ಯ ಹೇಳುವಂತೆ ಖಾದಿಯಪ್ಪನವರಿಗೆ ರಾಜಕೀಯ ಚೆಡ್ಡಿ ತೊಡಿಸಿದವರೇ ಅವರಂತೆ. ಆದರೆ ಈಗ ಖಾದಿಯಪ್ಪ ಗುರುವನ್ನು ಮಿಂಚಿನ ಶಿಷ್ಯಡು. ಚಮಚೇಶ ಇಬ್ಬರಿಗೂ ಬೇಕಾ

ದವರು. ಖಾದಿಯಪ್ಪ—ಟೋಪಣ್ಣಯ್ಯನವರ ಹಿಂ—ಮುಂಬಾಲಕರಲ್ಲಿ ಬೇಕಾದವರು, ಬೇಡಾದವರು, ಚಮಚೀಶರಿಗೆ ಬೇಕಾದವರು, ಒಟ್ಟಿನಲ್ಲಿ ಹೇಳುವುದಾದರೆ ಅಲ್ಲಿ ಸಲ್ಲುವವರು ಇಲ್ಲಿಯೂ ಸಲ್ಲುತ್ತಿದ್ದರು. ಚಮಚೀಶ ಚುನಾವಣೆಗೆ ಸ್ಪರ್ಧಿಸಲು ಠೇವಣಿ ಹಣವನ್ನು ಆಳುವ ಪಕ್ಷ ಹಾಗೂ ವಿರೋಧ ಪಕ್ಷಗಳು ಫಿಫ್ಟಿ—ಫಿಫ್ಟಿ ಹಾಕಿ ಕೊಡುತ್ತಿದ್ದುವರೆಂದು ಪ್ರತೀತಿಯಿತ್ತು. ಇನ್ನುಳಿದವರು ಕಮಲಾಪತಿ. ಮೇಲೆ ತಿಳಿಸಿದ ಮೂವರ ಹೆಸರಿನಂತೆ ಇವರ ಮೂಲ ಹೆಸರೂ ಪ್ರಜೆಗಳಿಗೆ ಗೊತ್ತಿರಲಿಲ್ಲ. ಅವರ ಹೆಂಡತಿ ಕಮಲಮ್ಮನವರ ಬಾಯನ್ನು ಮುಚ್ಚಲು ಯಾರಿಗೆ ಸಾಧ್ಯ! ಅಂತೆಯೇ ಕಮಲಾಪತಿ ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದರು.

ಎಲ್ಲಾ ಊರಿನಲ್ಲೂ ನಡೆಯುವಂತೆಯೇ ಇಲ್ಲಿಯೂ ಸಹ ಚುನಾವಣಾ ಪ್ರಚಾರ ಭರದಿಂದ ಸಾಗಿ, ಅವರ ಮೇಲೆ ಇವರು, ಇವರ ಮೇಲೆ ಅವರು ಎರಗಿ' ಎಗರಿ, ಕೊಳೆ ಬಟ್ಟೆಯನ್ನೆಲ್ಲಾ ಸಾರ್ವಜನಿಕವಾಗಿ ತೊಳೆದಿದ್ದರು. ಆರೋಪ—ಪ್ರತ್ಯಾರೋಪ, ಮೀಸೆ—ಗಡ್ಡ, ಬೋಳಿಸುವುದು—ಬೆಳೆಸುವುದು, ಪ್ರ ಮಾ ಣ, ಪ್ರವಚನ ಮುಂತಾದ ಎಲ್ಲಾ ವಿಧಿಗಳೂ ಜರುಗಿ ಫಲಿತಾಂಶವೂ ಹೊರಬಿದ್ದಿತ್ತು.

ಎಂದಿನಂತೆ ಚಮಚೀಶ್ರವರು ಠೇವಣಿಯನ್ನು ಈ ಬಾರಿಯೂ ಕಳೆದು ಕೊಂಡಿದ್ದರು. ಎರಡುಬಾರಿ ಜಯಶಾಲಿಯಾಗಿದ್ದ ಟೋಪಣ್ಣಯ್ಯ ಹಾಗೂ ಮೂರು ಬಾರಿ ಜಿತರಾಗಿ ಎರಡುಬಾರಿ ಪರಾಜಿತರಾಗಿದ್ದ ಖಾದಿಯಪ್ಪ ಇಬ್ಬರನ್ನೂ ಸೋಲಿಸಿ, ಒಮ್ಮೊಮ್ಮೆ ನಡೆದುಕೊಂಡು ಬಂದ ಕುದುರೆಯೇ ರೇಸಿನಲ್ಲಿ ಗೆಲ್ಲುವಂತೆ ಕಮಲಾಪತಿ ಚುನಾಯಿತರಾಗಿ ಜನತೆಗೆ ಕಮಾಲು ತೋರಿಸಿದ್ದರು,

ಅಷ್ಟರಲ್ಲಿ ಖಾದಿಯಪ್ಪನವರ ಮನೆಯ ಹತ್ತಿರಕ್ಕೇ ಬಂದಾಗಿತ್ತು. "ಅದು ಸರಿ ವಿಶ್ವ. ಈ ಪಾರ್ಟಿ ಏಕಾಗಿ?" ಪುನಃ ಕೇಳಿದೆ. ವಿಶ್ವ "ಸುಮ್ಮನಿರು, ನಿನಗೇ ತಿಳಿಯುತ್ತದೆ" ಎಂದು ಮನೆಯೊಳಗೆ ಕರೆದೊಯ್ದ.

ಮನೆ ಗಿಜಿಗಿಜಿಯಾಗಿತ್ತು. ಸುಮಾರು ಸಾವಿರಕ್ಕೂ ಹೆಚ್ಚು ಮಂದಿ ಸೇರಿದ್ದರು. ದೊಡ್ಡ ದೊಡ್ಡ ಪಾತ್ರೆಗಳಲ್ಲಿ ವಿಧವಿಧವಾದ ಸಿಹಿ ತಿಂಡಿಗಳು, ಬಿಸಿ ಬೇಳೆ ಭಾತ್ ಹಾಗೂ ವೆಜಿಟಬಲ್ ಪಲಾವ್ ಪ್ರತ್ಯೇಕ ಕಡಾಯಿಗಳಲ್ಲಿ. ಸೇಬು ಮಾವು, ಪರಂಗಿ, ಸಪೋಟ, ಬಾಳೆ, ಕರಬೂಜ ಹಣ್ಣುಗಳ ಚೂರುಗಳು ದೊಡ್ಡ ದೊಡ್ಡ ತಟ್ಟೆಗಳಲ್ಲಿ ರಾರಾಜಿಸುತ್ತಿದ್ದವು. ಬಂದವರನ್ನೆಲ್ಲಾ ಖಾದಿಯಪ್ಪನವರೇ ಖುದ್ದಾಗಿ ಸ್ವಾಗತಿಸುತ್ತಿದ್ದರು. ಬಂದವರ ಕೈಗೊಂದೊಂದು ಖಾಲಿ ತಟ್ಟೆ ಕೊಡಲಾಗುತ್ತಿತ್ತು. ತಮಗೆ ಬೇಕಾದ ತಿನಿಸುಗಳನ್ನು ತಮಗೆ ಬೇಕಾದಷ್ಟು ಹಾಕಿಕೊಂಡು ತಿನ್ನುವ (ಬಫೆ)

ಸ್ವಾತಂತ್ರ್ಯ (ಇದು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿದ್ದರೂ ಸಹ) ಅಲ್ಲಿ ನೆರೆದಿದ್ದ ವ್ಯಕ್ತಿಗಳಿಗೆ ಕೊಡಲಾಗಿತ್ತು.

ಕೊನೆಯಲ್ಲಿ ಪ್ರತಿಯೊಬ್ಬರಿಗೂ ice cold ಬಾದಾಮಿ ಹಾಲನ್ನು ಕಿಂಗ್ ಸೈಜ್ ಲೋಟಾಗಳಲ್ಲಿ ನೀಡಲಾಗುತ್ತಿತ್ತು. ಖಾದಿಯಪ್ಪನವರಿಂದಲೇ ಉಪಚಾರ. ಈ ಪಾರ್ಟಿಯೊಂದರ ಖರ್ಚಿನಲ್ಲಿ ಎರಡು ಚುನಾವಣೆಗಳನ್ನೆದುರಿಸ ಬಹುದಿತ್ತೆಂದು ವಿಶ್ವನ ಅಂದಾಜು.

ಎಲ್ಲರನ್ನು ಮಾತನಾಡಿಸುತ್ತಾ ನಮ್ಮ ಬಳಿಗೆ ಬಂದರು ಖಾದಿಯಪ್ಪ, "ಏನಯ್ಯಾ ವಿಶ್ವಾ ಚೆನ್ನಾಗಿದ್ದೀಯಾ ? ಹೇಗಿದೆ ಅರೇಂಜ್‌ಮೆಂಟ್ಸ್" ವಿಶ್ವನ ಭುಜ ಸವರಿ ಕೇಳಿದರು ಖಾದಿಯಪ್ಪ, 'ಭವ್ಯವಾಗಿದೆ' ಎಂದ ವಿಶ್ವ ಹೌದೆಂಬಂತೆ ನಾನೂ ತಲೆದೂಗಿ ಪೆಚ್ಚಾಗಿ ನಕ್ಕೆ, "ಏನೋಪ್ಪ, ಇನ್ನೂ ಚೆನ್ನಾಗಿ ಮಾಡೋ ಉದ್ದೇಶ ಇತ್ತು. ಆದ್ರೆ urgent ಎಲ್ಲಾ ಅನಿರೀಕ್ಷಿತ ನೋಡು". ಟ್ಯೂಬ್ ಲೈಟ್‌ಗೆ ಈಗ flash ಆಯ್ತು ಪಾರ್ಟಿ ಏಕೆಂದು. ಆದ್ರೆ ತಲೆಯೊಳಗೆ ಇಳಿಯ ದಿದ್ದ ವಿಚಾರ ಎಂದರೆ, ಕಮಲಾಪತಿ ಗೆದ್ದರೆ ಇವರು ಯಾಕೆ ಇಷ್ಟೊಂದು ಖರ್ಚು ಮಾಡಿ ಪಾರ್ಟಿ ಕೊಡಬೇಕು. ಹಾಂ ! ಹೌದು ಇದು ರಾಜಕೀಯ. ಗೆದ್ದೆತ್ತಿನ ಬಾಲ ಹಿಡಿಯೋದು, ತಮ್ಮ ಮನೆ ಬೇಳೆ ಬೇಯಿಸೋಕೆ ನೆರೆಯವರ ಮನೆಯಿಂದ ಸೋಡ ಉಪಯೋಗಿಸುವುದೇ ರಾಜಕೀಯ.

"ಇವ್ರು, ನಮ್ಮ ಮಾವ ಸಾರ್, ಪ್ರೆಸ್‌ನಲ್ಲಿದ್ದಾರೆ" ಪರಿಚಯಿಸಿದ ವಿಶ್ವ "ಪ್ರೆಸ್‌ನೋರಾ ನೀವು. ತುಂಬಾ ಸಂತೋಷ, ಪ್ರೆಸ್‌ನವರೂಂದ್ರೆ ನಮ್ಗೆ ತುಂಬಾ ಪ್ರೀತಿ, ಅಭಿಮಾನ. ನಮಗೆ ತುಂಬಾ ಹತ್ತಿರದವರೂ, ನೆಂಟರೂ ಅಂದರೆ ನೀವ್ರು ಹೀಹೀ" ಎಂದು ದೇಶಾವರಿ ನಗೆ ನಗುತ್ತಾ ಕೈ ಕುಲುಕಿದಾಗ ಅಂದುಕೊಂಡೆ ಪ್ರೆಸ್ ಎಂಬ ಶಬ್ದಕ್ಕೆ ಪೇಪರಿನವರೆಂದು ಅರ್ಥೈಸಿಕೊಂಡಿದ್ದಾರೆಂದು, "ಹಾಲು ಕುಡೀದ್ರಾ, ಕುಡೀರೀ ಇನ್ನು ಹೊಟ್ಟೆ ತಂಪು ಮಾಡಿಕೊಂಡು ಹೋಗಿ" ಎಂದರು.

ಇಲ್ಲಾ ಸಾರ್ ಕುಡಿದಾಯ್ತು ಎಂದರೂ ಕೇಳದೇ ಇನ್ನೇರಡು ಗ್ಲಾಸ್ ಹಾಲನ್ನು ತರಿಸಿ, ನನಗೊಂದು ವಿಶ್ವನಿಗೊಂದು ಕೊಟ್ಟರು. ನಾನುಕೈಗೆ ತೆಗೆದ ಕೊಂಡು "ತುಂಬಾಥ್ಯಾಂಕ್ಸ್ ಸರ್. ಪಾರ್ಟಿ ತುಂಬಾ ಗ್ರ್ಯಾಂಡ್ ಆಗಿತ್ತು. ನಮಗಂತೂ ಸಂತೋಷವಾಯ್ತು" ಎಂದೆ, ಚುನಾವಣೆಯಲ್ಲಿ ಗೆದ್ದಿದ್ದರೂ ಅವರಿಗಷ್ಟು ಸಂತೋಷವಾಗಿರುತ್ತಿತ್ತೋ ಇಲ್ಲವೋ, ಮುಖದ ತುಂಬ ಆನಂದದ ಕಳೆ ಪಸರಿಸಿ ಹೋಯ್ತು.

"ಆದ್ರೆ ಒಂದು ಸಂದೇಹ ಸರ್, ನೀವು ಇಷ್ಟು ಖರ್ಚುಮಾಡಿ ಪಾರ್ಟಿ ಕೊಟ್ಟಿದ್ದು ಯಾಕೇ ಅಂತ" ಕಮಲಾಪತಿಯವರು ಗೆದ್ದಿದ್ದು ನಿಮ್ಮ ಪಕ್ಷಕ್ಕೆ ಯಾವ ರೀತಿಯಿಂದ ಲಾಭ, ಎಂದು ತಡೆಯಲಾರದೇ ಕೇಳಿದೆ.

ಅವರ ಮುಖದ ಕಳೆ ಬದಲಾಯಿಸಿತು, ಕಣ್ಣು ಕೆಂಪಾಯಿತು ತಕ್ಷಣವೇ "ಏನ್ರಿ ನೀವು ಪ್ರೆಸ್‌ನವರು ತುಂಬಾ ಬುದ್ಧಿವಂತರು ಅಂದ್ಕೊಂಡಿದ್ದೆ" ಎಂದ್ರು ಸಿಡಿದರು. "ಸಾರಿ ಸರ್, ಈ ಪಾರ್ಟಿ ಏತಕ್ಕೆ ಎಂದು ಗೊತ್ತಾಗಿಲ್ಲಿಲ್ಲ. ಅದಕ್ಕೇ...." ಪ್ರಸನ್ನತೆಯನ್ನು ಗಳಿಸಿತ್ತು ಅವರ ಮುಖಾರವಿಂದ.

"ಹಾಗೆ ಕೇಳಿ ಪಾರ್ಟಿ ಏಕೆಂದು ? ನನ್ನ ಪರ್ಮನೆಂಟ್ ಪ್ರತಿ ಸ್ಪರ್ಧಿ ಟೋಪಣ್ಣಯ್ಯ ಚುನಾವಣೆಯಲ್ಲಿ ಸೋತು ಮಣ್ಣು ಮುಕ್ಕಿದ್ದಕ್ಕೆ....".

ಬೆಳಿಗ್ಗೆ

ಯುವಕರು ಮಲಗುವ, ಮುದುಕರು ಮೇಲಕ್ಕೇಳುವ ಕಾಲ

ಆಡಮ್ ಮತ್ತು ಈವ್ :

ಪ್ರಪಂಚದ ಅತ್ಯಂತ ಸುಖೀ ಜನ ;
ಯಾಕೆಂದರೆ ಇವರಿಬ್ಬರಿಗೂ ಅತ್ತೆಂದಿರೆ ಇರಲಿಲ್ಲ.

ಹೆಣ್ಣಿನ ಪ್ರೀತಿ

ಯಾವುದಾದರೂ ಹೆಣ್ಣು 'ಪ್ರಪಂಚದಲ್ಲಿ ಎಲ್ಲರಿಗಿಂತ ನಿಮ್ಮನ್ನು
ಹೆಚ್ಚು ಪ್ರೀತಿಸ್ತೀನಿ' ಅಂತ ಹೇಳಿದರೆ ನೀವು ನಂಬಬೇಡಿ
ಯಾಕೆಂದರೆ ಆಕೆ ಇನ್ನು ಪ್ರಯೋಗ ಮಾಡ್ತಿದ್ದಾಳೆ
ಎಂದು ಆ ಹೇಳಿಕೆ ಸಾಧಿಸಿ ತೋರಿಸುತ್ತದೆ.

ಬಿಗಿ ಷೂಗಳು

ಬಿಗಿ ಷೂಗಳಿಂದ ಒಂದು ಅನುಕೂಲ
ಇನ್ನಿತರ ತೊಂದರೆಗಳನ್ನು ಅವು ಮರೆಯುವಂತೆ ಮಾಡುತ್ತವೆ.

—ರಾ—

—ಜಿ. ಎಸ್. ಜಿ.

1 "ಅಪ್ಪಾ"

"ಮಗೂ"

"R. A. W' ಎಂದರೇನಪ್ಪಾ"

"Research and Analysis wing ಮಗೂ"

"R. A. W. ಪಲ್ಟೀ ಹೊಡೆದರೆ ಏನಾಗತ್ತೆ ಅಪ್ಪಾ? '

"WARಮಗೂ"

"ಪಂಜಾಬಿನಲ್ಲಿ ಆದೇ ಏನಪ್ಪ ಆದದ್ದು?

"ನಂಗೊತ್ತಿಲ್ಲ ಮಗೂ"

2 "ಅಪ್ಪಾ"

"ಹೇಳು ಮಗೂ"

"ನಮ್ಮ ಡೆಲ್ಲಿ 'ರಾ'ಗೆ "ರಾ ರಾ" ಎಂದವರು ಯಾರಪ್ಪಾ?"

"ದೊಡ್ಡವರು ಮಗೂ"

"ನಮ್ಮ 'ರಾ' ಅವರನ್ನೇ 'ಪೋ:ರಾ' ಎಂದರಂತೆ ಹೌದೇನಪ್ಪಾ?"

"ನಂಗೊತ್ತಿಲ್ಲ ಮಗೂ"

3 "ಅಪ್ಪಾ"

"ಏನು ಮಗೂ"

"RAW ಎಂದರೇನಪ್ಪಾ?"

"ಎಳಸು ಮಗೂ"

"ನಮ್ಮ 'ರಾ' ಇನ್ನೂ Raw ಏನಪ್ಪಾ?

"ಹಾಗಂತಾರೆ ಮಗೂ"

"ಲೋಕಸಭೆ ಚುನಾವಣೆ ಗೆದ್ದದ್ದು ನಮ್ಮ 'ರಾ' ಹೌದೇ ಅಪ್ಪಾ?"

"ಹೌದು ಮಗೂ"

"ನಮ್ಮ 'ರಾ'—ಹಾಗಾದರೆ Raw ಅಲ್ಲ–ಏನಂತಿ ಅಪ್ಪಾ?"

"ನಂಗೊತ್ತಿಲ್ಲ ಮಗೂ"

4 "ಅಪ್ಪಾ"

"ಕೇಳು ಮಗೂ"

"ಅಸೆಂಬ್ಲಿ ಚುನಾವಣೆ ಆಯ್ತಲ್ಲಪ್ಪಾ?

"ಆಯ್ತು ಮಗೂ"

"ಈಗ ಆಂಧ್ರದ 'ರಾ'ಗೆ ಏನೆಂತಾರಪ್ಪಾ?"

"Roaring 'ರಾ' ಮಗೂ"

"ಕರ್ನಾಟಕದ 'ರಾ'ಗೆ?"

"Ripened 'ರಾ' ಮಗೂ"

"ಕೇಂದ್ರದ 'ರಾ' ಹಾಗಾದರೆ ಇನ್ನೂ Raw ಹೌದೇನಪ್ಪಾ?

"ನಂಗೊತ್ತಿಲ್ಲ ಮಗೂ"

ಋಷಿಗಳ ತಪೋಭಂಗ

—ಡಾ. ಪರಡ್ಡಿ. ಮಲ್ಲಿಕಾರ್ಜುನ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ವಿಶ್ವಾಮಿತ್ರ : ಅತ್ಯಂತ ಜನಪ್ರಿಯು ವಾಗೂ ಬಹುರೋಮಾಂಚಕ (ರೊಮ್ಯಾಂಟಿಕ್)ವಾದ ಪ್ರಣಯಪ್ರಸಂಗ ವಿಶ್ವಾಮಿತ್ರನದೆಂದೇ ಹೇಳಬೇಕು. 'ಧಿಗ್ ಬಲಂ ಕ್ಷತ್ರಿಯ ಬಲಂ, ಬ್ರಹ್ಮ ತೇಜೋಬಲಂ ಬಲಂ' ಎಂದು ವಶಿಷ್ಠರೆದುರು ಸೋಲೋನೊಪ್ಪಿದ ರಾಜರ್ಷಿ ವಿಶ್ವಾಮಿತ್ರನು ನುಡಿಯುವುದರಲ್ಲಿಯ ಔಚಿತ್ಯ ವಿಚಾರ ಚರ್ಚೆ ಮಾಡದೇ ನಡೆಯುವದಿಲ್ಲ. ಬ್ರಹ್ಮ ವರ್ಚಸ್ಸಿನಿಂದಾಗುವ ಅನೂಕೂಲತೆ ಕಾತ್ರೆತೇಜಸ್ಸಿನಿಂದ ಸಾಧ್ಯವಿಲ್ಲವೆಂದು ಆವನು ಪ್ರತ್ಯಕ್ಷ ಮನ-ಗಂಡಿದ್ದಾನೆ. ಕ್ಷತ್ರಿಯ ರಾಜನಾದರೆ ಈ ಲೋಕದ ಸ್ತ್ರೀಯರಲ್ಲಿ ಬೇಕಾದರವನ್ನು ಸ್ತ್ರೀರತ್ನವೆಂದು ಕರೆದುಕೊಂಡು ಸ್ವೀಕರಿಸಬಹುದು. ಆದರೆ ಅಪ್ಸರೆಯರ ಸಂಗ ದೊರೆಯಬೇಕಾದರೆ ವೀರಮರಣ ಹೊಂದದೇ ಗತ್ಯಂತರವಿಲ್ಲ. ಜಿತ್ವಾವಾ ಭೋಕ್ಯಸೇ ಮಹೀಂ ಎಂಬ ಗಿತೋಕ್ತಿ ಇಲ್ಲಿ ಸ್ಮರಣೀಯ. ಆದರೆ ಬ್ರಾಹ್ಮರ್ಷಿಯಾಗಿ ತಪೋ ನಿರತನಾದರೆ ಅಪ್ಸರೆಯರ ಹಿಂದೇ ಸಾಲುಸಾಲಾಗಿ (ತಪೋಭಂಗಕ್ಕೆ ನಿಂತು) ಈ ಲೋಕದಲ್ಲಿಯೇ ಅವನಿಗೆ ಲಭಿಸುತ್ತದೆ. ಸತ್ತು ಸ್ವರ್ಗಸೇರದೇ ಸ್ವರ್ಗವನ್ನೇ ಈ ನಮ್ಮ ಧರೆಗೆ ಇಳಿಸಬಹುದು. ಸರ್ವಜ್ಞನ ವಚನವನ್ನು ಸ್ವಲ್ಪ ಬದಲಾವಣೆ ಗಳೊಂದಿಗೆ ಇಲ್ಲಿ ಉದಾಹರಿಸಬಹುದು.

"ಹಚ್ಚನೆಯ ಕಾಡೊಳಗೆ ಬೆಚ್ಚನೆಯ ಬೀಡಾಗಿ

ಇಚ್ಛೆಯಂತಿರುವ ಸತಿಯಾಗೆ ಅಪ್ಸರೆಯು

ಕಿಚ್ಚು ಸ್ವರ್ಗಕ್ಕೆ ಸರ್ವಜ್ಞ !"

ಆದಕ್ಕಾಗಿಯೇ ಉಗ್ರತಪಸ್ಸನ್ನು ಆಚರಿಸಿ ಬ್ರಹ್ಮರ್ಷಿ ಪದವಿಯನ್ನು ಪಡೆ ಯುವ ಪೂರ್ವದಲ್ಲಿಯೇ ಅವನಿಗೆ ಫಲ ಅಂದನೆ ಅಪ್ಸರೆಯ ಸಂಗ ದೊರೆಯುತ್ತದೆ.

ವಿಶ್ವಾಮಿತ್ರನ ತಪೋಭಂಗಕ್ಕೆ ಪ್ರಯತ್ನಿಸಿ ಅವನ ಶಾಪದಿಂದ ರಂಭೆ ಕಲ್ಲಾ ದುದು ಸಹಜವೇ ಆಗಿದೆ. (ಆ ಕಲ್ಲನ್ನು ಸ್ತ್ರೀರೂಪವಾಗಿ ಪರಿವರ್ತಿಸುವ ಯಾವ ರಾಮು ಬರಬೇಕೋ :) ಚಿರಯೌವನೆಯಾದರೂ ರಂಭೆ ಹಳಸಿದ ಅನ್ನದಂತೆ ಋಷಿಗೆ ರುಚಿಸದೇ ಹೋಗಿರಬೇಕು. ಅಥವಾ ಬ್ರಹ್ಮರ್ಷಿಯಾಗುವ ಹಂಬಲ ತೀವ್ರವಾಗಿರ

ಬೇಕು. ಆದರೆ ಕ್ರಮೇಣ ಜ್ಞಾನೋದಯವಾಗಿ ಬ್ರಹ್ಮರ್ಷಿ ಪದಪ್ರಾಪ್ತಿಗಿಂತಲೂ
ಬ್ರಹ್ಮರ್ಷಿ ಪದಫಲ ಮುಖ್ಯವೆಂದು ತೀರ್ಮಾನಿಸಿ ಬುದ್ಧನಾಗುತ್ತಾನೆ ; ಹೊಸ
ಜೇನುತುಪ್ಪ (ಮೊದಲ ಬಾರಿಗೆ ಅನುಭವಿಸಿದ ಯಾವುದೇ ಹೆಣ್ಣು ಹೊಸತೇ)
ಮಾತಿರುವ ಮೇನಕೆ (ಅವಳ ಮೇಕಪ್ ಮಾಡಿದವನನ್ನು ಎಷ್ಟು ಹೊಗಳಿದರೂ
ಸಾಲದು) ತನ್ನೆಲ್ಲ ಬೆಡಗು ಬಿನ್ನಾಣಗಳಿಂದರೊಗೂಡಿ ಉತ್ತೇಜಕ ವೇಷಭೂಷಣ
(ಮಿತವ್ಯಯದೊಡನೆ) ಗಳಿಂದ ನಾಟ್ಯಮಯೂರಿಯಾಗಿ ಮುಂದೆ ನಿಂತಿರಲು
ಸೌಂದರ್ಯಕಲೋಪಾಸಕನಾದ ವಿಶ್ವಾಮಿತ್ರನು ಅರಸಿಕನಾಗಲು ಸಾಧ್ಯವೇ ? ಯುವತಿ
ಯರ ಲೀಲೆಗಳನ್ನು ಕಂಡು ಕಣ್ಣು ಮುಚ್ಚುವ ಮನುಷ್ಯ ಪಶುವಲ್ಲದೆ ಮತ್ತೇನು ?
ಎಂದು ಒಬ್ಬ ಸುಭಾಷಿತಕಾರ ಕೇಳುತ್ತಾನೆ. ಅವಳ ನಾಟ್ಯಕ್ಕೆ, ಮಧುರಗಾನಕ್ಕೆ
ತಲೆದೂಗಿದ (ಏನುಮಹಾ ನಾಗರಹಾವೂ ತಲೆದೂಗುತ್ತದೆ) ವಿಶ್ವಾಮಿತ್ರ ಅವಳನ್ನು
ಯಥಾಶಕ್ತಿ ಉಪಚರಿಸಿದನು. ಇಂಥ ಸುಖಕ್ಕಾಗಿಯೇ ಅಲ್ಲವೇ ಅವನು ಆಪದ್ಧರ್ಮ
ವೆಂದು ಸತ್ತ ನಾಯಿಯ ಕೊಳೆತ ಮಾಂಸವನ್ನು ತಿಂದು ಜೀವಧಾರಣಮಾಡಿ
ಕೊಂಡದ್ದು ?

ಆಗ ಋಷಿಯ ತಪೋಭಂಗ ವಾಯೆಂದು ಹೇಳುವುದಕ್ಕಿಂತಲೂ ಅವನ
ತಪಸ್ಸು ಫಲಿಸಿತೆಂದು ಹೇಳುವುದು ಸಮಂಜಸ. ಯಾವ ಸಂಸಾರಕ್ಕೆ ಅಂಜಿ ಕಾಡಿನಲ್ಲಿ
ತಪೋನಿರತನಾಗಿದ್ದನೋ ಅದೇ ಸಂಸಾರ (ದೇವಲೋಕದ ಸುಂದರಿಯೊಡನೆ)
ಇಮ್ಮಡಿಯಾದ ಹುಮ್ಮಸ್ಸಿನೊಡನೆ ಪ್ರಾರಂಭಿಸುತ್ತಾನೆ. ‘ಸುಂದರೀ ವಾ ಹರೀ ವಾ’
ಎಂದು ಹೇಳಿ ಏಳು ಸಲ ಗೃಹಸ್ಥಾಶ್ರಮದಿಂದ ಸನ್ಯಾಸ ಮತ್ತು ಸನ್ಯಾಸದಿಂದ ಗೃಹ
ಸ್ಥಾಶ್ರಮದಿಂದ ಸ್ವೀಕರಿಸಿದ ಭರ್ತೃಹರಿಯ ಉಕ್ತಿಯ ಔಚಿತ್ಯ ಇಷ್ಟೇ. ಸುಂದರಿಯು
ದೊರೆಯದಿದ್ದಾಗ ಅಥವಾ ಸುಂದರಿಯು ದೊರೆಯಲೆಂದೇ ಹರೀ ಆಶ್ರಯಿಸಬೇಕು.
ಮೇನಕೆ ಗರ್ಭಧರಿಸಿ ಹೆಣ್ಣು ಕೂಸನ್ನು ಹೆತ್ತು ಅವನೆದುರಿಗೆ ಅವಳು ಹಿಡಿಯದೇ
ಹೋಗಿದ್ದರೆ, ಅವರ ಸಂಸಾರ ಎಷ್ಟು ಕಾಲದವರೆಗೆ ಅವಿರತವಾಗಿ, ಅವಿಚ್ಛಿನ್ನವಾಗಿ
ನಡೆಯುತ್ತಿತ್ತೊ ! ಯಾವ ಜವಾಬ್ದಾರಿಯೂ ಇಲ್ಲದೆ ಸಂಸಾರ ಸುಖ ಸವಿಯ
ಬಯಸಿದ ವಿಶ್ವಾಮಿತ್ರನಿಗೆ ತನ್ನೆರಡೂ ಕೈಗಳಲ್ಲಿ ಆ ಹೆಣ್ಣು ಕೂಸನ್ನು ಎತ್ತಿ ಹಿಡಿದು
ತೋರಿಸಿ, ಇದು ನಿಮ್ಮ ತದ್ರೂಪವೆಂದು ತೊದಲು ಸುಡಿ ನುಡಿದಾಗ (ಸ್ತ್ರೀಯರ
ಹಾವಭಾವಗಳಲ್ಲಿ ಅತಿ ಪ್ರಮುಖವಾದದ್ದು), ವಿಶ್ವಾಮಿತ್ರ ತನ್ನೆರಡೂ ಕೈಗಳನ್ನೆತ್ತಿ
ತಾನದಕ್ಕೆ ಹೊಣೆಯಲ್ಲವೆಂದು ಜವಾಬ್ದಾರಿಯ ನೊಗವನ್ನು ಹೊರುವ ಪೂರ್ವ
ದಲ್ಲಿಯೇ ಕೊಡವಿಕೊಳ್ಳುತ್ತಾನೆ. ರವಿವರ್ಮನ ಚಿತ್ರ ನೋಡಿದಾಗ ಈ ಭಾವಕೆ
ಉದಯಿಸದೇ ಹೋದರೆ ಅವನು ರಸಿಕನೆಂದು ಸಹೃದಯನೆಂದು ಹೇಗೆ ಅನಿಸಿ
ಕೊಂಡಾನು ? ಸಂತಾನವು ತನ್ನ ಸ್ವೇಚ್ಛಾಜೀವನಕ್ಕೊಂದು ಮುಳ್ಳು ಎಂದು

ಭಾವಿಸಿದ ಮೇನಕೆಯೂ ಕೈಕೊಡವಿಕೊಂಡು ಸೀದಾ ಸ್ವರ್ಗದ ದಾರಿ ಹಿಡಿದಳು, ಅಂದರೆ ಆ ಕೂಸನ್ನು ಕಾಡಿನಲ್ಲಿಯೇ ಬಿಟ್ಟು ಇಂದ್ರನಿಗೆ ತನ್ನ ಕಾರ್ಯ ಸಿದ್ಧಿಯನ್ನು ತಡವಾಗಿಯಾದರೂ ಹೇಳಲು ಹೋಗುತ್ತಾಳೆ. ಹೀಗೆ ಅನಾಥವಾದ ಆ ಕೂಸನ್ನು ಶಕುಂತ(ಪಕ್ಷಿ)ಗಳು ಸಾಕಿದ್ದರಿಂದಾಗಿ ಶಕುಂತಲೆಯೆನಿಸಿ ಮುಂದೆ ಕಣ್ವರ ಅನಾಥಶ್ರಮದಲ್ಲಿ ಬೆಳೆದಳು. ಋಷ್ಯಾಶ್ರಮಗಳು ಅನಾಥಾಶ್ರಮಗಳೆನ್ನುವುದಕ್ಕೆ ನಿದರ್ಶನಗಳ ಕೊರತೆಯಿಲ್ಲ. ವಿಶ್ವಾವಸುವೆಂಬ ಗಂಧರ್ವರಾಜನಿಂದ ಇದೇ ಮೇನಕೆಯಲ್ಲಿ ಜನಿಸಿದ ಪ್ರಮದ್ವರೆಯೆಂಬ ಹೆಣ್ಣು ಕೂಸನ್ನು (ಬಹುಶಃ ಮೇನಕೆಗೆ ಹೆಣ್ಣು ಸಂತಾನವೇ ಬ್ರಹ್ಮಲಿಖಿತವಿರಬೇಕು!) ಸ್ಥೂಲಕೇಶನೆಂಬ ಋಷಿ ತನ್ನ ಆಶ್ರಮದಲ್ಲಿ ಪಾಲಿಸಿ ಪೋಷಿಸಿ ರುರರವೆಂಬ ಋಷಿಕುಮಾರನ ಜೊತೆ ಮದುವೆ ಮಾಡಿಕೊಟ್ಟ ಒಂದೇ ನಿದರ್ಶನವಿಲ್ಲಿ ಸಾಕು. ಅಭಿಜ್ಞಾನಶಾಕುಂತಲವೆಂಬ ತನ್ನ ನಾಟಕದ ನಾಯಿಕೆಯಾದ ಶಕುಂತಲೆಗೆ ತವರುಮನೆ ಇಲ್ಲವೆಂದರೆ ಸರಿಯಾಗಲಿಕ್ಕಿಲ್ಲವೆಂದು ಭಾವಿಸಿ ಮೇನಕೆಗೂ ಮಾತೃಹೃದಯವನ್ನು ವಿಶಾಲಮನೋಭಾವದ ಕವಿ ಕಾಳಿದಾಸ ಕರುಣಿಸಿದ್ದಾನೆ. ಅಂದರೆ ದುಷ್ಯಂತನಿಂದ ತ್ಯಕ್ತಳಾದ (ಇದಕ್ಕೆ ದುರ್ವಾಸ ಕಾರಣವೆಂದು ಈಗಾಗಲೇ ತಿಳಿದಿದೆ) ಶಕುಂತಲೆ ಕಣ್ವಾಶ್ರಮದ ಹಾದಿಯಾಗಿ ಬಂದು ಅದಾಗ (ಹೆಣ್ಣು ಮಗು ಅನಾಥಾಲಯದಲ್ಲಿ ಬೆಳೆದು ಮದುವೆಯಾಯ್ತೆಂದರೆ ಆ ಸಂಸ್ಥೆಯ ಜವಾಬ್ದಾರಿ ತೀರಿದಂತೆ :) ಅವಳ ಆರ್ತನಾದವನ್ನು ಕೇಳಿ ಮುಂದಿನ ರಾದ್ಧಾಂತವಾಗುವ ಪೂರ್ವದಲ್ಲಿಯೇ ಅಂದರೆ ತನ್ನ ಗ ತ ವೈ ಭ ವ ಜನಜನಿತವಾಗುವ ಮೊದಲೇ ಮೇನಕೆ ಅವಳನ್ನು ಎತ್ತಿಕೊಂಡು ಹೋಗಿ ಮತ್ತೊಂದು ಆಶ್ರಮದಲ್ಲಿ (ಮಾರೀಚಶ್ರಮದಲ್ಲಿ) ಅವಳನ್ನು ಇರಿಸುತ್ತಾಳೆ. ತನ್ನ ಕರ್ತವ್ಯ ಮುಗಿಯಿತೆಂದು ಸಮಾಧಾನದ ನಿಟ್ಟುಸಿರು ಬಿಡುತ್ತಾಳೆ.

ಅಪ್ಸರೆಯರ ಸಂಗದಿಂದ ತಪೋಭಂಗ (ಭಂಗವೊದಲು ಸಂಗ ಆಮೇಲೆ ಎನ್ನುವುದು ಸರಿಯಾದ ಕ್ರಮ) ಸಂಸಾರಹೂಡಿ ಸಂತಾನ- ಪಡೆದ ಸಂಗತಿ ಒಂದೆಡೆ ನಮ್ಮ ಗಮನ ಸೆಳೆಯುತ್ತಿದ್ದರೆ, ಅವರ ಸಂದರ್ಶನ ಮಾತ್ರದಿಂದಲೇ ಕಚ್ಚೆಸಡಿಲಾಗಿ (ಮುಕ್ತಕಚ್ಚರೋ ಹೇಗೆಂಬ ಚರ್ಚೆ ಅನಗತ್ಯ) ಅವರ ವೀರ್ಯ ಸ್ಖಲನವಾಗಿ ಶಿಶು ಜನ್ಮವಾದುದೂ ಅದ್ಭುತರಮ್ಯ (ಕೃತ್ರಿಮ ಗರ್ಭಧಾರಣೆ ಪ್ರಣಾಲಶಿಶು ಮುಂತಾದ ವಿಷಯ ಬಗ್ಗೆ ಮತ್ತೊಮ್ಮೆ ಸಮಯ ದೊರೆತರೆ ಸ್ಮರಣೆಯಲ್ಲಿದ್ದರೆ ವಿಚಾರಿಸೋಣ) ಊರ್ವಶಿಯ ದರ್ಶನದಿಂದ ವಿಭಾಂಡಕ ಮುನಿಯ ವೀರ್ಯ ಸ್ಖಲನವಾಗಲು, ಅದನ್ನು ಸೇವಿಸಿದ ಹೆಣ್ಣುಜಿಂಕೆ ಋಷ್ಯಶೃಂಗನೆಂಬ ಮಗನನ್ನು ಪಡೆಯಲು, ಆತನು ಕಾಲಾನಂತರ ದಶರಥಮಹಾರಾಜನ ಸಾಕುಮಗಳಾದ ಶಾಂತೆಯನ್ನು ಮದುವೆಯಾದ ಘಟನೆ ಇಂದಿನ ನಮ್ಮ ವಿಜ್ಞಾನಿಗಳ ಗರ್ವಭಂಗ ಮಾಡಲು ಸಮರ್ಥವಲ್ಲವೇ ?

ಕಶ್ಯಪಮುನಿಯಿಂದ ಪಾಥೆಯೆಂಬ ಅಪ್ಸರೆಯಲ್ಲಿ ಜನಿಸಿದ ಘೃತಾಚಿಯೆಂಬ ಅಪ್ಸರೆಯನ್ನು ನೋಡಿದಮಾತ್ರಕ್ಕೆ ಮನಃ ಕ್ಷೋಭೆಗೊಂಡ ಭಾರದ್ವಾಜಮುನಿ ದ್ರೋಣನನ್ನು ಪಡೆದ ಬಗೆಯಂತೂ ಅಧುನಿಕ ವಿಜ್ಞಾನಿಗಳು, ತಾವೆಷ್ಟು ಶತಮಾನ ಗಳಷ್ಟು ಹಿಂದಿದ್ದೇವೆ ಎಂದು ತಿಳಿಯುವಂತೆ ಮಾಡುವದಿಲ್ಲವೆ ?

ಶುಕರೂಪವನ್ನು ಧರಿಸಿದ ಇವಳಲ್ಲಿಯೇ ವ್ಯಾಸಮುನಿ ಶುಕಮುನಿಯನ್ನು ಪಡೆದುದು, ಪ್ರಮತಿಯೆಂಬ ಋಷಿ ರುರುವನ್ನು ಪಡೆದುದು ಭೂಲೋಕದಲ್ಲಿ ಗೊಲ್ಲನೊಬ್ಬನಿಗೆ ಮಗಳಾಗಿ ಹುಟ್ಟಿ ಮನುಜ ರೂಪಧರಿಸಿದ ವಿಶ್ವಕರ್ಮನ ಜೊತೆ ಅನೇಕಕಾಲ ಸುಖದಿಂದ ಇದ್ದು, ವಿಶ್ವಕರ್ಮಜನಾಂಗವನ್ನು ಸೃಷ್ಟಿಸಿದ್ದು, ಆ ಜಂಜಾಟಕ್ಕೆ ಅಂಜಿ ಪುನಃ ಮೂಲ ರೂಪ ಪಡೆದುದು, ಹೀಗೆ ಒಂದೇ ಎರಡೇ ? ಅವುಗಳ ನಿರೂಪಣೆಯೇ ಒಂದು ಬ್ರಹ್ಮಾಂಡ ಪುರಾಣವಾದೀತು.

ತಪೋಭಂಗಗೊಳಿಸಲು ಸಕಲಸನ್ನದ್ಧರಾಗಿ ಬಂದ ಅಪ್ಸರೆಯರನ್ನು ಕಂಡು ಅವರಿಗೆ ಪಾಠ ಕಲಿಸಲು [ಇದು ಅಸಂಭವ. ಏಕೆಂದರೆ ಅವರು ಕಲಿತ್ತಿದ್ದರೆ, ಪುರಾಣಗಳೆಲ್ಲ ಇಂಥ ಘಟನೆಗಳ ಪುನಾರಾವೃತ್ತಿಯಾಗುತ್ತಿರಲಿಲ್ಲ] ನರನಾರಾಯಣರು ತಮ್ಮ ತೊಡೆಯಿಂದ ಊರ್ವಶಿಯೆಂಬ ಲೋಕೋತ್ತರ ಸುಂದರಿಯಾದ ಅಪ್ಸರೆಯನ್ನು ಹುಟ್ಟಿಸಿದಾಗ, ಅವರು ಮಾನಭಂಗ [ಶಾಂತದ ಪಾಪಂಗರ್ವಭಂಗ] ಹೊಂದಿ ಪಲಾಯನಗೈದುದನ್ನು ಕೇಳುತ್ತೇವೆ.

ಭೂಲೋಕದ ದೊರೆಯೂ, ಗಂಡುತನದಲ್ಲಿ ಅದ್ವಿತೀಯನೂ ಆದ ರಾಜಾ ಪುರುಷನನ್ನು ಮೋಹಿಸಿ [ದೇವಲೋಕದಲ್ಲಿಯ ಸರಸತ್ತ್ವದೇವತೆಗಳಿಂದ ಅವರಿಗೆ ಯಾವ ಆಕರ್ಷಣೆಯು ಇರಲಿಲ್ಲ] ಅವನ ಜೊತೆ ಅನೇಕ ವರ್ಷಕಾಲ ಸಂಸಾರ ಹೂಡಿ ಆಯು ಮುಂತಾದ ಆನೇಕ ಪುತ್ರರತ್ನಗಳನ್ನು ಹೆತ್ತು [ಹೊತ್ತದ್ದು ಸಹ; ಅರಸನಿಗ ಗೊತ್ತಿಲ್ಲವೆಂಬುದಕ್ಕೆ ಕಾಳಿದಾಸ ವಿಕ್ರಮೋರ್ವಶೀಯದಲ್ಲಿ ಸಾಕ್ಷಿಯಾಗಿದ್ದಾನೆ]. ನಮ್ಮ ಭರತಭೂಮಿಗೆ ಮಹದುಪಕಾರ ಮಾಡಿದ್ದಾಳೆ. ಅದೇ ತಪಸ್ಸು ಮಾಡಿ ಪಾಶುಪತ ಅಸ್ತ್ರವನ್ನು ಪಡೆದು ಇಂದ್ರಕೀಲದಿಂದ ಸ್ವರ್ಗಕ್ಕೆ [ಸನ್ಮಾನ ಹೊಂದಲು] ಬಂದಿರುವ ಅರ್ಜುನನ ಜೊತೆಯೂ ಸಂಸಾರ ಹೂಡಿ ಈ ಸೇವೆಯನ್ನು ಮುಂದು ವರಿಸಬೇಕೆಂದು ಊರ್ವಶಿಗೆ ಅರ್ಜುನನಿಂದ ಆಶಾ ಭಂಗವಾಯ್ತು. ವಿಶ್ವದಲ್ಲಿ ಗಂಡುಹೆಣ್ಣು ಎರಡು ಜಾತಿಗಳೆಂದು ನಂಬಿ ಆಚರಿಸುತ್ತಿದ್ದ ಅವಳಿಗೆ ಅವಳು ತನ್ನ ತಾಯಿಗೆ ಸಮಾನವೆಂದು ಹೇಳಿದರೆ ಅವಳಿಗೆ ಸಿಟ್ಟು ಬಾರದಿದ್ದೀತೆ? ತನ್ನ ತಾಯಿಯ ವಯಸ್ಸಾಗಿದೆ ಎಂದು ಅವಮಾನ ಅರ್ಜುನ ಮಾಡಬಹುದೇ ? ಈ ಗೊಡ್ಡು ವೇದಾಂತವನ್ನು ಹೇಳಿ ತನ್ನ ಒಡ್ಡತನವನ್ನು ಮೆರೆಸಿದ ಅರ್ಜುನನ್ನು ಕಂಡು ಕನಿಕರ

ವಾಗಬೇಕಿತ್ತು. ಆದರೆ ಅವನ ಮೇಲಿನ ಮೋಹ ಇನ್ನೂ ಕಡಿಮೆಯಾಗದೆ ಅವಳು ಶಾಪಕೊಡುತ್ತಾಳೆ. ಪ್ರೀತಿ ಅಸಫಲವಾದರೆ ದ್ವೇಶವಾಗುವುದನ್ನು ಅಂದರೆ ದ್ವೇಷ ಪ್ರೀತಿಯ ಮೇರು ಎಂಬುದನ್ನು ನಾವೆಲ್ಲ ತಿಳಿದಿಲ್ಲವೇ ? ಆದುದರಿಂದಲೇ ವಿಷ್ಣು ರಾಕ್ಷಸರಿಗೆ ಮೋಕ್ಷ ದಯಪಾಲಿಸುವದನ್ನು ಕಾಣುತ್ತೇವೆ. ನಿಸರ್ಗಸಹಜವಾದ ಪ್ರಾಣಿಧರ್ಮ [ಮನುಷ್ಯನನ್ನು ಬಿಟ್ಟು ಉಳಿದ ಪ್ರಾಣಿಗಳು ಪಾಲಿಸುವ ಧರ್ಮ] ವನ್ನು ಅನೂಚಾಗಿ ಪಾಲಿಸುತ್ತಿದ್ದ ಊರ್ವಶಿಯಂಥ ಸ್ತ್ರೀಭಾವಿಗಳಿಗೆ ಕ್ಷತ್ರಿಯ ಅಥವಾ ಅನೈಸರ್ಗಿಕ ಧರ್ಮಬೋಧೆ ಮಾಡ ಹೊರಟ ಅರ್ಜುನನು ಅವಳಿಗೆ ನಪುಂಸಕನಲ್ಲದೆ ಗಂಡುಸಾಗಿ ತೋರಬಲ್ಲನೇ ? ತನ್ನ ಸಂಶಯವನ್ನು ಪರಿಹರಿಸಲು ನಪುಂಸಕನಾಗೆಂದು ಶಾಪಕೊಡಲು ಬೃಹನ್ನಳೆಯಾಗಿ ವಿರಾಟಕುಮಾರನ ಸಾರಥಿಯಾಗುವ ಪೂರ್ವದಲ್ಲಿ ಅಂತಃಪುರದ ಸ್ತ್ರೀಯರಿಗೆ ಅದರಲ್ಲೂ ಉತ್ತರೆಗೆ ನರ್ತನಚಾರ್ಯೆಯಾಗಿ ಕಾಲಕಳೆಯುವ ಛಾನ್ಸ್ ದೊರೆಯುವಂತೆ ಮಾಡುತ್ತಾಳೆ. ಇಂಥ ಬಲಿಷ್ಠಳಾದ ಊರ್ವಶಿಯನ್ನೇ ಕಾಳಿದಾಸ ತನ್ನ ನಾಟಕದಲ್ಲಿ ಗೃಹಿಣಿಯನ್ನಾಗಿ ಅಂದರೆ ಪಳಗಿಸಿ (tame) ನಾಟಕದ ಸ್ವಾರಸ್ಯವನ್ನು ಹೆಚ್ಚಿಸಿದ್ದಾನೆ. ಕಾಳಿದಾಸನ ಈ ಅತುಲಶಕ್ತಿಯನ್ನು ಯಾರಾದರೂ ಮೆಚ್ಚಬೇಕು.

ಕವಿಕುಲಗುರುವಾದ ಕಾಳಿದಾಸ ತೃಣಬಿಂದುವೆಂಬ ಋಷಿಯ ತಪೋಭಂಗಕ್ಕೆ ಪ್ರಯತ್ನಿಸಿದ. ಹರಿಣಿ ಎಂಬ ಅಪ್ಸರೆಯು ಅವನ ಶಾಪದಿಂದ ಇಂದುಮತಿಯಾಗಿ ಜನಿಸಿ ಅಜಮಹಾರಾಜನಿಗೆ ಮಹಾರಾಣಿಯಾಗಿ ಚಿಕ್ಕವಯಸ್ಸಿನಲ್ಲಿಯೇ ಒಬ್ಬ [ದಶರಥ] ಮಗನನ್ನು ಹೆತ್ತು ನಾರದರ ವೀಣೆಯ ಹೂಮಾಲೆ ಬಿದ್ದು ಸತ್ತು ಸ್ವರ್ಗ ಸೇರುವುದನ್ನು ಯಾವ ಪುರಾಣದಿಂದ ತಿಳಿದನೋ ತಿಳಿಯದು. ಅವನ master-mind ಅಂಥದು.

ಕೆಲಸೌಮ್ಯ ಸ್ವಭಾವದ ಅಪ್ಸರೆಯರು ಋಷಿಗಳ ತಪೋಭಂಗಕ್ಕೆ ಪ್ರಯತ್ನಿಸದೇ, ಅವರ ಸೇವೆಯನ್ನು ನಿಷ್ಠೆಯಿಂದ ಮಾಡಿ, ಅವರನ್ನು ಒಲಿಸಿಕೊಂಡು ಅಂದರೆ ಒಲಿದು ಕೂಡಿದ ಅವರಿಂದ ಮಕ್ಕಳನ್ನು ಸಹ ಪಡೆದ ಸಂಗತಿ ಅಷ್ಟು ರೋಮಾಂಚಕವಲ್ಲದಿದ್ದರೂ. ಕುತುಹಲಕಾರಿಯಾಗಿದೆ. ಅತ್ಯುಗ್ರತಪಸ್ಸಿನಲ್ಲಿ ಮಗ್ನನಾದ ಜೂಲಿಯೆಂಬ ಋಷಿಯನ್ನು ಸೋಮದೆಯೆಂಬ ಗಂಧರ್ವಕನ್ಯೆ ಅನನ್ಯಭಾವದಿಂದ ಸೇವಿಸುತ್ತಿರಲು ಬಹಿಮುಖನಾದ ಋಷಿ ಅವಳ ಕೋರಿಕೆಯನ್ನು ಮನ್ನಿಸಿ [ತನಗೂ ಅದು ಇಷ್ಟವೇ] ಅವಳನ್ನು ಕೂಡಿ ಬಾಹ್ಮದತ್ತನೆಂಬ ಮಗನನ್ನು ದಯಪಾಲಿಸಿದ. ಇನ್ನು ತಾತ್ಕಾಲಿಕವಾದ ಮೋಹದಿಂದ ಕಾಮಿಸಿ ಅಪ್ಸರೆಯರ ಸಂಗ ಮಾಡಿ ಅದಕ್ಕೆ ಹೇಸಿದ ಕೆಲ ಋಷಿಗಳು ಅವರನ್ನು ಹೆದರಿಸಿ ಓಡಿಸಿದ ಪ್ರಸಂಗಗಳೂ ಅಪರೂಪವಲ್ಲ. ಕಂಥ ಅಥವಾ ಕಂಡು ಎಂಬ ಋಷಿ ಗೋಮತಿ ತೀರದಲ್ಲಿ ತಪಸ್ಸು ಮಾಡುತ್ತಿರಲು

ಇಂದ್ರಪ್ರೇರಿತಳಾದ ಒಬ್ಬ ಅಪ್ಸರೆ [ಪ್ರಮ್ಲೋಚನೆ] ಅವನ ತಪೋಭಂಗಗೊಳಿಸಿ ಆವನ ಜೊತೆ ಅನೇಕ ವಸಂತಗಳವರೆಗೆ ಸಂಸಾರ ಮಾಡಿದ್ದರೂ ಗರ್ಭಧರಿಸಿ ಕೂಸನ್ನು ಹೆರುವ ಸಂಭ್ರಮದಲ್ಲಿರುವಾಗ ಬಿದ್ದವನು ಎದ್ದು ಸಂಧ್ಯಾವಂದನೆಗೆ ಹೊರಟು ನಿಂತಾಗ ಅಪ್ಪಗಟ್ಟಿದ ಅವಳನ್ನು ಗದರಿಸಿ ಓಡಿಸಲಾಗಿ ಅವರಿಂದ ಅವಳ ಗರ್ಭಸ್ರಾವ ವಾದರೂ ಏನೇನೋ ಅವಾಂತರವಾಗಿ ಕೊನೆಗೆ ಮಾರಿಷೆಯೆಂಬ ಕುಮಾರಿಯ ಜನನ ಸಾಧ್ಯವಾಗಿ, ವಾರ್ಕ್ಷಿ ಎಂಬ ನಾಮಾಂತರದಿಂದ ಪಿತೃದೇವತೆಗಳನ್ನು ವರಿಸಿ ಸುಖ ವಾಗಿರುವದು ಸೋಜಿಗದ ಪ್ರಸಂಗವಲ್ಲವೇ ?

ಹೀಗೆ ಒಬ್ಬರಿಗೊಬ್ಬರು ಕಾಟಕೊಡುವ ನೆವದಿಂದ ಕೂಟವನ್ನು ಈ ಬಯಸಿದ ಗಂಡು ಹೆಣ್ಣುಗಳು ದಿವ್ಯಸಂದೇಶವನ್ನು ಸಾರುವ ಋಷಿತಪೋಭಂಗ ಪ್ರಸಂಗಗಳು ಅದ್ಭುತರಮ್ಯವಲ್ಲವೇ? ಇಲ್ಲಿ ಒಂದರಡುಮಾತು ಅವಿಸ್ಮರಣೀಯ. ಇಂದ್ರನ ಒಡ್ಡೋ ಲಗದಲ್ಲಿ ಗಾಯನ ಕೀರ್ತನ ಮಾಡಿಕೊಂಡು ಉಂಡುಟ್ಟು ಸುಖವಾಗಿದ್ದ ವಾರವನಿತೆ ಯರಾದ ಅಪ್ಸರೆಯರಿಗೆ ಮದುವೆ ಸಾಮಾನ್ಯವಾಗಿ ನಿಷಿದ್ಧ, ಇಂದ್ರನ ಅಪ್ಪಣೆಯ ಮೇರೆಗೆ ಋಷಿಗಳ ತಪೋಭಂಗಮಾಡಿ (ಅದಕ್ಕೆ ಬೇರೆ ಪಾರಿಶ್ರಮಿಕ remuneration ಇತ್ತೆಂಬುದಕ್ಕೆ ಆಧಾರವಿಲ್ಲ. ಏಕೆಂದರೆ ಹೆಚ್ಚಿನ ಪರಿಶ್ರಮವಿಲ್ಲದ ನ್ಯಾಯಸಮ್ಮತ), ಅವರ ಜೊತೆ ಚಕ್ಕಂದವಾಡುವದು ಇವರಿಗೆ ಎಲ್ಲಿಲ್ಲದ ಹಿಗ್ಗು. ವಿಲಾಸ ವಿನೋದ ಗಳೇ ಉಸಿರಾಗಿರುವ ದೇವತೆಗಳು ನಿರ್ವೀರ್ಯರಾಗಿದ್ದು, ಅವರ ಸಂಗ ಈ ಚಪಲಯ ರಿಗೆ ಬೇಸರ ತಂದಿರಬೇಕು. ಹೀಗಿರಲು ತಪಸ್ಸು ಆಚರಿಸಿ ಹುರಿಗೊಂಡ ಗಂಡು ದೇಹದ ಋಷಿಗಳನ್ನು ಕಂಡರೆ ಅವರ ಬಾಯಲ್ಲಿ ನೀರೂರಿ ಶಾಪದ ಭಯಕ್ಕೂ ಹೆದರದೇ ರಿಸ್ಕ ತೆಗೆದುಕೊಳ್ಳಲು ಹಿಂದುಮುಂದು ನೋಡುವದಿಲ್ಲ. ಇದೇ ಕಾರಣಕ್ಕೆ ಇರಬೇಕು. ವೀರಯೋಧರು ರಣಭೂಮಿಯಲ್ಲಿ ವೀರಮರಣ ಹೊಂದಿದಾಗ ಸ್ವರ್ಗದ ಅಪ್ಸರೆಯರು ಅವರನ್ನು ವರಿಸಲು ನಾಮುಂದು ತಾಮುಂದು ಎಂದು ಸ್ಪರ್ಧೆಗಿಳಿ ಯುತ್ತಾರೆ. ಅಂದರೆ ಋಷಿಗಳ ತಪೋಭಂಗ ಮಾಡುವದು ಇವರ ಪಾಲಿಗೆ ಹಬ್ಬದಾ ಚರಣೆ. ಆಗಾಗ ಉಂಟಾಗುವ ಗರ್ವಭಂಗ ಶಾಪಪ್ರಾಪ್ತಿ ಇವೆಲ್ಲ ತೃಣಪ್ರಾಯ. ಕೇವಲ ಇಂದ್ರನ ಒತ್ತಾಯಕ್ಕೆ ಕಟ್ಟುಬಿದ್ದು ಅಷ್ಟೇ ಅಲ್ಲ, ತಮ್ಮ ಅಭೀಷ್ಟ ಪೂರ್ತಿ ಗಾಗಿ ಆಗಾಗ ಇವರ ತಪೋಭಂಗಕ್ಕೆ ಕೈಹಾಕುತ್ತಿದ್ದರು.

ಇನ್ನೊಂದು ವಿಶೇಷವೆಂದರೇ ಚಿರಯೌವನದಿಂದ ಕೂಡಿದ ಇವರಿಗೆ ಸಂತಾನಾ ಪೇಕ್ಷೆ ಸಾಮಾನ್ಯವಾಗಿ ಸೊನ್ನೆ. ಕೆಲವೊಂದು ಅಪವಾದಗಳಿರುವದನ್ನು ಈ ಹಿಂದೆಯೇ ನೋಡಿದ್ದೇವೆ. ಅದುದರಿಂದಲೇ ತೃಣಬಿಂದುವಿನ ಆಶ್ರಯಕ್ಕೆ ಬಂದು ಅಲ್ಲಿಯೇ ತಪೋನಿರತನಾದ ಬ್ರಹ್ಮಪುತ್ರ ಪುಲಸ್ತ್ಯಮುನಿಯು ತನ್ನ ತಪೋಭಂಗಕ್ಕೆ ಬಳಿಬಂದ

ಅಪ್ಸರೆ ಮುಂತಾದವರಿಗೆ 'ನನ್ನ ಕಣ್ಣಿಗೆ ಬಿದ್ದರೂ ಸಾಕು. ನೀವು ಗರ್ಭಧರಿಸುತ್ತಿರಿ' ಎಂದು ಹೆದರಿಸಿದ. ಆ ಹೆದರಿಕೆ ಹುಸಿಗುಂಡು ಅಲ್ಲವೆಂದು ಅನೇಕ ನಿದರ್ಶನಗಳೊಂದಿಗೆ ತೀರ್ಮಾನಿಸಿದ ಅವರಾರು ಅಲ್ಲಿ ಸುಳಿಯುವದನ್ನು ನಿಲ್ಲಿಸಿದರಂತೆ.

ಕೊನೆಯದಾಗಿ ಮಹಾಭಾರತದ ಶಾಕುಂತಲೋಪಖ್ಯಾನದ ನಾಯಿಕೆ ಶಕುಂತಲೆ (ತಂಬೂರಿ ಹಿಡಿದು) 'ಕಥೆ ಹೇಳುವೆ, ನಮ್ಮ ಕಥೆ ಹೇಳುವೆ' ಎಂದು ತನ್ನ ಅಪ್ಪ ಅಮ್ಮರ ಪ್ರಣಯಗೀತೆಯನ್ನು ಹಾಡುತ್ತಿರಲು ಅಥವಾ ಶಾಕುಂತಲ ನಾಟಕದಲ್ಲಿ ಶಕುಂತಲೆಯ ಗೆಳತಿಯರು ಪೇಚಿಗೆ ಸಿಕ್ಕು ಆ ಪ್ರಣಯ ಪ್ರಸಂಗವನ್ನು ಸಾಕಷ್ಟು ಸಂಕ್ಷೇಪ್ತವಾಗಿ ನಿರೂಪಿಸಲಾಗಿ ನಾಯಕನಾದ ದುಷ್ಯಂತ "ಪುಣ್ಯಕಥಾಶ್ರವಣದಿಂದ ಪುನೀತನಾದ ನನಗೆ ಇನ್ನೂ ತೃಪ್ತಿಯಿಲ್ಲ (ಅಸ್ತಿನಃ ಸಚ್ಚರಿತಶ್ರವಣಲೋಭಾದನ್ಯದಪಿ ಪ್ರಷ್ಟವ್ಯಮು)" ಎಂದು ಹೇಳಿದಂತೆ ನಿಮ್ಮಲ್ಲಿ ಯಾರಾದರೂ ಈ ಪುರಾಣ ಪುಣ್ಯ ಕಥಾಶ್ರವಣದಿಂದ ಇನ್ನೂ ತೃಪ್ತರಾಗದಿದ್ದರೆ ಅಂದರೆ ಇನ್ನಷ್ಟು ಪ್ರಸಂಗ ನಿರೂಪಣೆಗೆ ಡಿಮ್ಯಾಂಡ್ ಮಾಡಿದರೆ ಯಥಾವತ್ ಕಾಲಾವಕಾಶ, ಸ್ಥಳಾವಕಾಶ ನೋಡಿ ಇನ್ನಷ್ಟು ಸ್ವಾರಸ್ಯಕರ ಪ್ರಸಂಗಗಳನ್ನು ವಿವೇಚಿಸಲಾಗುವದು.

(ಮುಗಿಯಿತು)

ತಿರುಗು ಬಾಣ

—ಸುನೀತಿ ಕೃಷ್ಣಸ್ವಾಮಿ

ಸ್ಥಳ :—ಮಹಿಳಾ ಸಮಾಜ

ಕಾಲ :—ಯಮಗಂಡಕಾಲ

ವಿಷಯ :—ಜಾತಕ ಮತ್ತು ಮೂಢ ನಂಬಿಕೆ

ಅಂತ್ಯ? :—ಲೇಖನದ ಕೊನೆಯಲ್ಲಿ ಓದಿ ನೋಡಿ......ಸಸ್ಪೆನ್ಸ್!

ಜಾನಿಯ ಭಾಷಣ ಬಿರುಸಿನಿಂದ ಸಾಗಿತ್ತು. ಒಂದೊಂದು ಪಾಯಿಂಟನ್ನೂ ಹಿಡಿದೂ ಹಿಡಿದೂ ಜಗ್ಗಾಡಿ ಸಭಿಕರ ಮನದಲ್ಲಿ ಮನ ಮುಟ್ಟುವಂತೆ ವಾಗ್ಝರಿ ಹರಿಸಿದ್ದಳು. ಹೆಣ್ಣು ಹೆತ್ತ ತಾಯಮ್ಮಗಳಿಗೆ ರೇಷನ್ ಖೋಟಾದಲ್ಲಿ ಸಣ್ಣಕ್ಕಿ ಸಿಕ್ಕ ಆನಂದವಾದರೆ, ಗಂಡು ಮಕ್ಕಳ ತಾಯಂದಿರಿಗೆ ಪಾಯಸದಲ್ಲಿ ಜಿರಲೆ ಸಿಕ್ಕ ಅನುಭವ. ಅವರವರ ಅನುಭವಕ್ಕೆ ಅವರವರ......ಅಂದಂತೆ.

ಅದೋ ಕಿವಿಯ ತಮಟೆ ಹರಿದು ಹೋಗುವಂತೆ ಉದ್ರೇಕದಿಂದ ಕಿರುಚು ತ್ತಿದ್ದಾಳೆ ಜಾನಿ. "ಸೋದರಿಯರೇ! ಈ ಜಾತಕಪಾತಕ ಅಂತ ಕೂಡಬೇಡಿ. ಯಾವತ್ತಿನವರೆಗೂ ಈ ಮೂಢನಂಬಿಕೆ ಹೋಗುವುದಿಲ್ಲವೋ ಅವತ್ತಿನವರೆಗೂ ಈ ಭಾರತೀಯರು ಪ್ರಗತಿ ಹೊಂದಲು ಸಾಧ್ಯವೇ ಇಲ್ಲ.ನೀವೇ ಹೇಳಿ, ಯಾವುದೋ ಮನೆಯ ಹುಡುಗಿ ಎಲ್ಲೋ ಹುಟ್ಟಿ ಎಲ್ಲೋ ಸೇರುವ ಈ ಹುಡುಗಿ ನಕ್ಷತ್ರ, ಸೇರಿದ ಮನೆಯವರಿಗೆ ಯಾವ ರೀತಿ ಹಾನಿಕಾರಕವಾಗಬಹುದು? ಯೋಚಿಸಿ! ನಿಮ್ಮ ಬುದ್ಧಿ ಶಕ್ತಿಗೆ ಕೊಂಚ ಕಸರತ್ತು ಕೊಡಿ ಚಿಂತನ ಶೀಲರಾಗಿ, ವೈಚಾರಿ ಕತೆಯಿಂದ, ವೈಜ್ಞಾನಿಕ ದೃಷ್ಟಿಯಿಂದ ವಿಚಾರ ಮಾಡಿ ಯಾವುದೇ ಒಂದು ಹುಡುಗಿಯ ನಕ್ಷತ್ರವಾಗಲಿ ರಾಶಿಯಾಗಲೀ, ಗ್ರಹಗತಿಯಾಗಲೀ, ದೋಷ ವಾಗಲೀ ಗಂಡಿನ ಹಾಗೂ ಗಂಡಿನ ಮನೆಯವರ ದುರದೃಷ್ಟಕ್ಕೆ ಹೇಗೆ ಕಾರಣವಾಗ ಬಹುದು ಹೇಳಿ? ನಾವೇನು ಹುಟ್ಟಿದ ಘಳಿಗೆಯನ್ನು ಅಷ್ಟು ನಿಖರವಾಗಿ ಬರೆ ದಿಡಲು ಸಾಧ್ಯವೇ? ಹಾಗಾಗಿದ್ದಲ್ಲಿ ನೂರಕ್ಕೆ ನೂರರಷ್ಟು ಸರಿ ಹೊಂದಿದ್ದ ಜಾತಕದ ವರ ವಧೂಗಳಲ್ಲಿ, ವರ ಮದುವೆಯಾದ ಮೂರು ತಿಂಗಳಿಗೆ ಅಕಾಲ ಮರಣ ಹೊಂದಿದ್ದು ಕೇಳಿದ್ದೇನೆ. ವಧೂ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. (ಇದಕ್ಕೆ ಕಾರಣ ಅವಳ ಅತ್ತೆ ಎಂದು ಹೇಳಬೇಡಿ. ಅವಳಿಗೆ ಪುಣ್ಯವಶಾತ್

ಅತ್ತೆಯೇ ಇರಲಿಲ್ಲ!) ಆದ್ದರಿಂದ ನಾನು ಮತ್ತೆ ಒತ್ತಿ ಹೇಳುವುದೇನೆಂದರೆ ಈ ಜಾತಕದ ಹುಚ್ಚು ಬಿಡಿ. ಇನ್ನು ಮುಂದೆ ಹುಟ್ಟುವ ಮಕ್ಕಳಿಗೆ ಜಾತಕವೇ ಬರಸಬೇಡಿ. ಮೂಗು ಇರುವವರೆಗೂ ನೆಗಡಿ ತಪ್ಪಿದ್ದಲ್ಲ ಅನ್ನುವ ಹಾಗೆ ಈ ಜಾತಕ ಇರುವವರೆಗೆ ಮೂಢ ನಂಬಿಕೆ ತಪ್ಪಿದ್ದಲ್ಲ. ಮೂಗಿಲ್ಲದಿದ್ದರೆ ಮುಖ ನೋಡಲು ಅವಲಕ್ಷಣ. ಆದರೆ ಜಾತಕ ಇಲ್ಲವಾಯಿತೆಂದರೆ ಎಲ್ಲವೂ ಲಕ್ಷಣವಾಗಿರುತ್ತದೆ. ನಾನು ಗಂಡು ಮಕ್ಕಳ ತಾಯಿಯಾಗಿ ಎದೆ ತಟ್ಟಿ ಹೇಳುತ್ತಿದ್ದೇನೆ "ಜಾತಕಕ್ಕೆ ಧಿಕ್ಕಾರ! ಜಾತಕಕ್ಕೆ ಧಿಕ್ಕಾರ" ಮಹಿಳಾ ಮಣಿಗಳೆಲ್ಲಾ ಒಕ್ಕೊರಲಿನಿಂದ ಅರಚಿದರು. ಹೆಣ್ಣು ನಾಲ್ಕು ಹೆತ್ತ ಸುಭದ್ರಳ ಹೃದಯ ಆನಂದದಿಂದ ಢವಢವ ಹೊಡೆಯಿತು. ಇಲ್ಲ ನಗಾರಿ ಬಾರಿಸಿತು. ಅವಳ ದುರದೃಷ್ಟಕ್ಕೆ ಒಂದಕ್ಕೆ ಭಾವ ಇಲ್ಲದ ಮನೆ ಜ್ಯೇಷ್ಠ ನಕ್ಷತ್ರ, ಒಂದು ಮಾವ ಗೊಟಕ್ ಅಂದಿರ ಬೇಕು. ಹಾಗಂದ್ರೆ ಮೂಲಾ ಒಂದು ಮೈದುನ ಇಲ್ಲದ್ದು ವಿಶಾಖ ಇನ್ನೊಂದು ದ ರಿ ದ್ರ ನ ಕ್ಷ ತ್ರ ದ್ದು. ಆಶ್ಲೇಷಾ—ಅರ್ಥಾತ್ ಅತ್ತೆ ಇಲ್ಲದ ಮನೆ! ಈ ಹುಡುಗಿ ಇನ್ನೂ ಮದುವೆ ಇಲ್ಲದೇ ನಿಂತಿರುವ ಕನ್ಯೆ!

ದೀಪ ಇಟ್ಕೊಂಡು ಹುಡುಕಿದ್ರೂ ಅತ್ತೆ ಇಲ್ಲದ ಮನೆ ಈಕೆಯ ಮುದ್ದು ಮಗಳಿಗೆ ಸಿಕ್ಕಿರಲಿಲ್ಲ. ಹಾಳು ಹೆಣ್ಣುಗಳು ಬಲು ಗಟ್ಟಿ ಪಿಂಡಗಳು. ಗಂಡನ್ನ ಮೇಲೆ ಕಳಿಸಿ ಗಟ್ಟಿಯಾಗಿ ಭೂಮಿಗೆ ಅಂಟಿಕೊಂಡು ಕೂತಿರತ್ವೆ ಎಂದು ಬೈದೂ ಇದ್ಲು. ಹಾಗೆ ನೋಡಿದ್ರೆ ಸುಭದ್ರ ಜೀವಂತವಾಗಿಲ್ವೇ? ಅವಳ ಸಂಕಟ ಈ ಮಾತು ಅಡ್ಗಿಸ್ತಿತ್ತು ಅನ್ನಿ, ಆದರೆ ಜಾನಿಯ ಭಾಷಣ, ಅವಳ ಜೀವನಾಡಿನಿಂತೇ ಹೋಗಿದ್ದು ಮತ್ತೆ ಆಕ್ಸಿಜನ್ ತುಂಬಿ ಬಡಿಯ ತೊಡಗಿತ್ತು. ಮೂರನೇ ದಿನ ಜಾನಿಯ ಮನೆಗೆ ಧೈರ್ಯಮಾಡಿ ಹೋಗೇ ಹೋದಳು.

* * * * *

"ಓ! ಬನ್ನಿ.......ಬನ್ನಿ......ಏನು ಬಹಳ ಅಪರೂಪ" ಹೆಣ್ಣು ಮೇಳ ಹೆತ್ತಿದ್ದ ಸುಭದ್ರಾಗೆ ಹೇಗೆ ಮಾತನಾಡಬೇಕೆಂದು ಗೊತ್ತಿಲ್ಲೇ?

"ಹೀಗೇ ಬಂದೆ, ನಿಮ್ಮ ಭಾಷಣ ನಿನ್ನೆ ಕೇಳಿದೆ. ಸಾಕ್ಷಾತ್ ವಾಗ್ದೇವಿಯೇ ನಿಮ್ಮ ನಾಲಿಗೆಯ ಮೇಲೆ ನಿಂತು ನಲಿದಾಡಿದಂತಿತ್ತು. "ಅಬ್ಬಾ ನಮ್ಮಂತ ಹೆಣ್ಣು ಹೆತ್ತ ತಾಯಂದಿರಿಗೆ ಮರುಳು ಗಾಡಿನಲ್ಲಿ ತಂಪಾದ ನೀರು ಸಿಕ್ಕ ಹಾಗಾಯ್ತು ನಿಮ್ಮಂತಹವರು ಗಂಡು ಮಕ್ಕಳ ತಾಯಿಂದಿರ ಕಣ್ತೆರಸಬೇಕು ನೋಡಿ" ಹೊಗಳಿದಳು. ಜಾನಿ ಸೋಫಾದಿಂದ ಒಂದಡಿ ಮೇಲೆ, ಎರಡಡಿ ಅಗಲ ಅಡ್ಡವಾಗಿದ್ದಳು ಸುಭದ್ರ ಮುಂದುವರೆಸಿದಳು.

"ನನ್ನ ಮೂರು ಹೆಣ್ಮಕ್ಳಿಗೆ ಮದುವೆ ಮಾಡಿ ಸಾಗ್ಹಾಕೋ ಹೊತ್ಗೆ ಮತ್ತೆ ಹುಟ್ಟಿ ಬಂದೆ ನೋಡಿ. ಈಗ ನಾಲ್ಕನೆಯವಳದು ಆಗ್ಬೇಕು ದೊಡ್ಮನಸ್ಸು ಮಾಡಿ ತಮ್ಮ ಎರಡನೆಯ ಮುಡುಗನಿಗೆ ತಂದ್ಕೊಂಡ್ರೆ ಬಹಳ ಉಪಕಾರವಾಗತ್ತೆ ಜಾತಕದಲ್ಲಿ ನಿಮಗೆ ನಂಬಿಕೆ ಇಲ್ಲಾಂತ ತಿಳಿದು ನಾನು ತರೋ ಗೋಜಿಗೇ ಹೋಗ್ಲಿಲ್ಲ" ಯಾಕೋ ಜಾನಿ ಮುಖ ಕಪ್ಪಿಟ್ಟಿತು. ಸಾವರಿಸಿಕೊಂಡು. "ಓ.... ಹೇ.... ಹೇ.... ಹೆ....ಹೆ .. ನಿಜ....ನಿಜ ಜಾತಕ ಒಂದು ಗೊಡ್ಡು ಸಂಪ್ರದಾಯ ನಂಗೇನು ನಂಬಿಕೆ ಯಿಲ್ಲ. ನೀವು ನೋಡಿದ್ರೆ ಸಂಪ್ರದಾಯಸ್ಥರಾಗಿ ಕಾಣ್ತೀರಿ. ನೀವು ನನ್ನ ಮಗನಿಗೆ ಕೇಳಬೇಕಾದ್ರೆ ನೀವು ಯೋಚ್ನೆ ಮಾಡೇ ಮುಂದುವರೆಸಿರ್ತೀರಾ....... ನಿಮ್ಮ ಹುಡುಗೀದು ಜ್ಯೇಷ್ಟ ನಕ್ಷತ್ರ ಅಲ್ಲ ಅಂತ ಕಾಣತ್ತೆ."

"ಛೇ! ಛೇ! ಅಲ್ಲ ಅಲ್ಲ ನಿಮ್ಮ ಹಿರಿ ಮಗ ಇರೋವಾಗ ನಾನು ಕೇಳ್ತೀನ್ಯೇ?"

"ಸರಿ. ವಿಶಾಖಾನೂ ಅಲ್ವೇನೋ?"

"ಖಂಡಿತಾ ಅಲ್ಲ ಕಿರಿ ಮಗ ಚೆನ್ನಾಗಿರಬೇಡ್ವೇ?"

"ಮೂಲಾನೂ ಅಲ್ವೇನೋ. ಏನೋ ವಯಸ್ಸಾದ ಮುದುಕರಾದ್ರೆ ಒಂದು ತರಹ.......ಇವರ್ಗೆ ಅಂತಾ ವಯಸ್ಸೇನೂ ಇಲ್ಲ. ಆದ್ರೂ ಹುಡುಗಿ ಚೆನ್ನಾಗಿದ್ರೆ ಇದೆಲ್ಲಾ ನೋಡಬಾರದೂಂದ್ರೆ ಏನಂತಿರಿ.

"ಹೌದೌದು ನೀವು ಹೇಳೋದು ಸರಿ"

"ಸರಿ ಮತ್ತೆ ಹುಡುಗೀನ್ನ ಕರ್ಕೊಂಡು ಬನ್ನಿ. ಒಪ್ಗೆ ಆದ್ರೆ ನಂದೇನೂ ಅಭ್ಯಂತರವಿಲ್ಲ." ಸುಭದ್ರ ಮೊರದಗಲ ಮುಖ ಮಾಡ್ತಾ

"ಅಬ್ಬಾ! ನಾ ಗೆದ್ದೆ. ನನ್ನ ಮಗಳು ರತಿ ಇದ್ದ ಹಾಗಿದ್ದಾಳೆ, ಹಾಳಾದ್ದು ಈ ಕೆಟ್ಟ ಆಶ್ಲೇಷಾ ನಕ್ಷತ್ರದಲ್ಲಿ ಹುಟ್ಟದೇ ಇದ್ದಿದ್ರೆ....

"ಆಂ!" ಉದ್ರೇಕದಿಂದ ಎದ್ದ ಜಾನಿ ತಲೆ ಸುತ್ತಿ ಬೀಳೋವಾಗ ಪಕ್ಕದ ಕಲ್ಲಿನ ಮೇಜು ತಲೆ ಬುರುಡೇ ತಾಕಿ ಕೆಳಗೆ ಬಿದ್ದವಳು ಮತ್ತೆ ಏಳಲೇ ಇಲ್ಲ!.

* * * * *

ಸುಭದ್ರನ ಮಗಳು ಈ ಹುಡುಗನನ್ನು ಮದುವೆಯಾಗಿ ಸುಖವಾಗಿದ್ದಳು

ಯಾರಪ್ಪನ ಗಂಟು

—ಬಿ. ಎ. ಸನದಿ

(ಕ್ಷಮೆಯಾಚಿಸಿ)

ಎನಿತು ಕಾಲ ಹಾಡುತಿರಲಿ
ಬೆಳ್ದಿಂಗಳ ಹಾಡು ?
ಬೆಳ್ಳಗಿದ್ದುದೆಲ್ಲ ಹಾಲು
ಎಂಬ ಭ್ರಮೆಯ ಜಾಡು ?

ದೇಶ—ದೇಶಗಳಲ್ಲಿ ಬೇರೆ
ಚಂದ್ರಾಮನ(ಳ) ಲಿಂಗ
ಹೆಣ್ಣೊ ಗಂಡೊ ಎಂದು ಕೇಳೆ
ಕವಿಗಳ ಮುಖಭಂಗ,

ಚಂದ್ರನೀವ ಬೆಳ್ದಿಂಗಳು
ಯಾರಪ್ಪನ ಗಂಟು ?
ಸೂರ್ಯನಿಂದ ಕದ್ದು ತಂದು
ಹೊಡೆಯಲೇಕೆ ಪಂಟು ?

ಕಳ್ಳಪೇಟೆಯಲ್ಲಿ ದೊರೆವ
ಪರದೇಶದ ಮಾಲು
ಚಂದ್ರನ ಬಾಜಾರದಲ್ಲೆ
ತನ್ನದೆಂಬ ಶೀಲು.

ಇಂತು ನಮ್ಮ ಬದುಕಿನಲ್ಲಿ
ತಿಂಗಳರ್ಧ ತಿಂಗಳು
ಅಸಲಿ—ನಕಲಿ ಶೋಧದಲ್ಲಿ
ದಣಿಯುತಿಹವು ಕಂಗಳು.

ಶುಭಾಶಯಗಳೊಂದಿಗೆ

ದೂರವಾಣಿ : 353346/385814

ರೋನಿಶ ಅಂಡ್ ಕಂಪನಿ

315, ಗುರುಸಿದ್ದ ಕೃಪ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560 086

ವಿತರಕರು : "ಜೆನಿಸಿಸ್" ಟೆಲಿಫೋನ್ ಉಪಕರಣಗಳು
"ಹೈಲೆಟ್" ಎಮರ್ಜೆನ್ಸಿ ಲೈಟುಗಳು
"ಇಂಪಾಲ" ಇಂಟರ್ ಕಾಂಗಳು

ಶುಭಾಶಯಗಳೊಂದಿಗೆ

ಜಯಂತಿ ಪವರ್ ಪ್ರೆಸ್

ಬೆ ಂ ಗ ಳೂ ರು.

ಶುಭಾಶಯಗಳೊಂದಿಗೆ

ಸುರೇಶ್ ಮಲ್ಪಾನಿ ಅಂಡ್ ಕಂಪನಿ

"ಇಂಡಸ್ಟ್ರಿ ಹೌಸ್"

ನಂ. 35, ರೇಸ್ ಕೋರ್ಸ್ ರಸ್ತೆ : : ಬೆಂಗಳೂರು_560 001

ಶುಭಾಶಯಗಳೊಂದಿಗೆ ;—

ಸ್ಕೈಲಾರ್ಕ್ ಆ್ಯನ್ಸಲರೀಸ್ ಕಾರ್ಪೊರೇಷನ್


ಎ–118, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,

ಬೆಂಗಳೂರು–560 058.

ಶುಭಾಶಯಗಳೊಂದಿಗೆ :—

ವೆರೈಟಿ ಫುಡ್ ಪ್ರಾಡಕ್ಟ್ಸ

ಉತ್ತಮ ದರ್ಜೆ ಬಿಸ್ಕತ್ತುಗಳ ತಯಾರಕರು



ಕಾರ್ಖಾನೆ : ನಂ. 55, ಬೊಮ್ಮಸಂದ್ರ ಇಂಡಸ್ಟ್ರಿಯಲ್
ಲೇಔಟ್, ಆನೇಕಲ್ ತಾಲ್ಲೂಕು
ಬೆಂಗಳೂರು ಜಿಲ್ಲೆ

ಶುಭಾಶಯಗಳೊಂದಿಗೆ

ಟರ್ನ್-ಕೀ ಕನ್‌ಸ್ಟ್ರಕ್ಷನ್ಸ್
(ಪ್ರೈ) ಲಿಮಿಟೆಡ್

11ನೇ ಮೇನ್ ರಸ್ತೆ
ಬೆಂಗಳೂರು–560003

ಫೋನ್ : 364118

ಶುಭಾಶಯಗಳೊಂದಿಗೆ

ಬಿ. ಎಸ್. ವಿಜಯೇಂದ್ರ ಅಸೋಸಿಯೇಟ್ಸ್

281, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು–560 010

ಶುಭಾಶಯಗಳೊಂದಿಗೆ

ಟೆಕ್ನೋಲಿಂಕ್ ಎಂಟರ್‌ಪ್ರೈಸಸ್

ನಂ. 35, 5ನೇ ಕ್ರಾಸ್ 1ನೇ ಮೇನ್, ಎಸ್. ಕೆ. ಗಾರ್ಡನ್
ಬೆನ್‌ಸನ್ ಟೌನ್, ಬೆಂಗಳೂರು–560 046

ಶುಭಾಶಯಗಳೊಂದಿಗೆ

ಎಕ್ಸೆಲ್ ಟೂಲ್ಸ್ ಎಂಡ್ ಇಂಜಿನೀರಿಂಗ್ ಎಂಟರ್‌ಪ್ರೈಸಸ್

ಬಿ–20, 1ನೇ ಕ್ರಾಸ್, 1ನೇ ಸ್ಟೇಜ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು–560 058.




ಶುಭಾಶಯಗಳೊಂದಿಗೆ

ಮಹಾವೀರ್ ಪೇಪರ್ ಮಾರ್ಟ್

MAHAVEER PAPER MART

229/3, ಸುಲ್ತಾನ್‌ಪೇಟೆ, 560 053

229/3, SULTANPET, BANGALORE–560 053



ಪೇಪರ್, ಬೋರ್ಡ್ ಮತ್ತು ಸ್ಟೇಷನರಿ ವ್ಯಾಪಾರಿಗಳು

(Dealers in Paper, Board & Stationery)

ನಮ್ಮಲ್ಲಿ ಸದಾಕಾಲದಲ್ಲೂ ಗುಜರಾತಿ ಹಾಗೂ ಮಾರವಾಡಿ
ಲೆಕ್ಕ ಪುಸ್ತಕಗಳು ದೊರೆಯುತ್ತದೆ.

(Gujarathi & Marvadi Account Books are
always available with us)

—:ಶುಭಾಶಯಗಳೊಂದಿಗೆ:—



ದಿ ಸಂಡೂರ್ ಮ್ಯಾಂಗನೀಸ್ ಅಂಡ್
ಐರನ್‌ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಚೇರಿ :

"ಲೋಹಾದ್ರಿ ಭವನ"

ಯಶವಂತ ನಗರ್–583 124 ಸಂಡೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ